ಪಂಚಮ

ಸಂಪುಟ : 11
ಸಂಚಿಕೆ : 5-8
ಮಾರ್ಚ್-ಏಪ್ರಿಲ್ 1987
ಬೆಲೆ 1 ರೂ.

ಹೆಗಡೆಗೆ ಹೆಂಡದ ಕಾಣಿಕೆ ದ.ಸಂ.ಸ. ನಿರ್ಧಾರ

ವಿಷಪೂರಿತ ಹೆಂಡದ ಮೂಲಕ ದಲಿತರ ಬಾಳಿಗೆ ಉರುಳಾಗಿರುವ ಹೆಂಡದ ದೊರೆ ಹೆಗಡೆಗೆ ಪ್ರತಿ 5 ಬಾಟ್ಲಿ ಹೆಂಡದ ಕಾಣಿಕೆ ನೀಡಲು ಕ.ದ.ಸಂ.ಸ. ತೀರ್ಮಾನಿಸಿದೆ. ಊರೂರುಗಳಲ್ಲಿ ಬಡವರ ಅರೆ ಹೊಟ್ಟೆಗೆ ಶೂಲ ತಿವಿಯಲು ತಲೆ ಎತ್ತಿ ನಿ[illegible]ವ ಹೆಂಡದ ಪಡಕಾನೆಗಳು ಆ ಮೂಲಕ ಹೆಂಡದ ಗುತ್ತಿಗೆದಾರ ಪ್ರಭುಗಳ ತಿಜೋರಿ ತುಂಬಲು ಹುಸಿ ನಗೆ ಬೀರುತ್ತಾ ಸಜ್ಜಾಗಿ ನಿಂತ ಹೆಗಡೆಯವರ ಸರ್ಕಾರ-ಬಡವರ ಬದುಕಿಗೆ ಶಾಶ್ವತವಾದ ಗೋರಿ ಕಟ್ಟಲು ತೀರ್ಮಾನಿಸಿದೆ.

ಪ್ರತಿ ಪ್ರಜ್ಞಾವಂತ ಪ್ರಜೆಯೂ ನಾಚಿ ತಲೆಬಾಗಬೇಕಾದ ಈ ಅನೈತಿಕ ಪಾಪ ಕಾರ್ಯವನ್ನು ಜುಲೈ 4 ಮತ್ತು 5 ರಂದು ರಾಯಚೂರಿನಲ್ಲಿ ನಡೆದ ರಾಜ್ಯಸಮಿತಿ ತೀವ್ರವಾಗಿ ಪರಿಗಣಿಸಿದೆ. ಕಳೆದ ವರ್ಷದಂತೆ ಈ ವರ್ಷವೂ ಹೆಗಡೆಯ ಬೇಡದ ಹೆಂಡವನ್ನು ಧಿಕ್ಕರಿಸಿ ದಲಿತರ ಮಕ್ಕಳಿಗೆ ಅತ್ಯಗತ್ಯವಾಗಿ ಬೇಕಾದ 'ಹೋಬಳಿಗೊಂದು ವಸತಿಶಾಲೆ'ಯ ಬೇಡಿಕೆಯನ್ನು ಮುಂದಿಟ್ಟು ಒತ್ತಾಯಿಸಲಿದೆ. ಇದೊಂದೇ ಈ ವಿಷದ ಜಾಲದಿಂದ ಬಿಡುಗಡೆ ಪಡೆದು ನಿಜ ಸ್ವಾತಂತ್ರ್ಯದತ್ತ ನಡೆಯಲು ಉಳಿದಿರುವ ಏಕೈಕ ದಾರಿ ಎಂದು ದ.ಸಂ.ಸ. ಭಾವಿಸಿದೆ. ವಿಷದ ಹೆಂಡದ ಮಾರಾಟ-ನಿಷೇಧ, 'ವಸತಿ ಶಾಲೆ' ಒತ್ತಾಯಿಸುವುದರ ಜತೆಗೆ ಸರ್ಕಾರವೇ ಕನ್ನಡದಲ್ಲಿ ಅಂಬೇಡ್ಕರ್ ಸಾಹಿತ್ಯ ಪ್ರಕಟಿಸಬೇಕೆಂಬ ಇನ್ನೊಂದು ಬೇಡಿಕೆಯನ್ನೂ ಮುಂದಿಡಲಿದೆ.

ರಾಜ್ಯದಾದ್ಯಂತ ನಡೆಯಲಿರುವ ಸ್ವಾತಂತ್ರ್ಯದ 40 ನೇ ವರ್ಷದ ಅದ್ದೂರಿ ಹಬ್ಬದ ಹಿಂದಿನ ದಿನ ದ.ಸಂ.ಸ. ಶಾಖೆಗಳು ಪ್ರತಿ ಜಿಲ್ಲಾ ಕೇಂದ್ರದಲ್ಲೂ ಬೃಹತ್ ಮೆರವಣಿಗೆ ನಡೆಸಿ ತಮ್ಮ ಪ್ರತಿಭಟನೆಯನ್ನು ಸಲ್ಲಿಸಲಿವೆ. ಅಂದೇ ಆ ಜನರ ಸಮ್ಮುಖದಲ್ಲೇ ಹೆಂಡದ ದೊರೆ ಹೆಗಡೆಗೆ ತಲಾ ಐದು ಬಾಟ್ಲಿ ಹೆಂಡವನ್ನೂ ಕಾಣಿಕೆಯಾಗಿ ಸಲ್ಲಿಸಲಿದೆ.

ಮುಖ್ಯಮಂತ್ರಿ ಹೆಗಡೆ ನೇತೃತ್ವದ ಜನತಾ ಸರ್ಕಾರ 'ಮೌಲ್ಯಾಧಾರಿತ ರಾಜಕಾರಣ'ದ ಘೋಷಣೆ ನೀಡಿ ದಲಿತರು, ರೈತರು ಮತ್ತು ಪ್ರಗತಿಪರ ಬೆಂಬಲ ಪಡೆದು ಅಧಿಕಾರದ ಗದ್ದುಗೆಗೆ ಏರಿತು. ಅಧಿಕಾರ ಸಿಕ್ಕ ಕೂಡಲೇ ಜನಪರ ಯೋಜನೆಗಳನ್ನು ಕೈಬಿಟ್ಟು, ಕೆಳವರ್ಗವ ಮಧ್ಯಮ ವರ್ಗದ ಜನರನ್ನು. ವಂಚಿಸುತ್ತಾ ಕಾಂಗ್ರೆಸ್ ಸರ್ಕಾರವನ್ನೂ ನಾಚಿಸುವ ಮಟ್ಟದಲ್ಲಿ ಅಧಿಕಾರ ನಡೆಸುತ್ತಿದೆ.

ಜನರನ್ನು ವಂಚಿಸುವಂತಹ ಕುರಿ, ಕೋಳಿ, ತಾಳಿ, ಸೀರೆ ಮುಂತಾದ ಅರೆಬರೆ ಯೋಜನೆಗಳನ್ನು ಬಿಟ್ಟು, ಹೋಬಳಿಗೊಂದು ವಸತಿ ಶಾಲೆ ಕೊಡಿ ಎಂದು 1985ರ ಆಗಸ್ಟ್ 15ರಂದು ದ.ಸಂ.ಸ. ಇದೇ ಜನತಾ ಸರ್ಕಾರವನ್ನು ಕೇಳಿತ್ತು. ಶಾಸನ ಸಭೆಯಲ್ಲೂ ಇದು ಪ್ರಸ್ತಾಪವಾಗಿತ್ತು ಇದರ ಅವಶ್ಯಕತೆಯನ್ನು ಮನಗಂಡ ಮುಖ್ಯಮಂತ್ರಿಗಳು ಸಧ್ಯಕ್ಕೆ ತಾಲ್ಲೂಕಿಗೊಂದು ವಸತಿ ಶಾಲೆ ಕೊಡುವುದಾಗಿಯೂ ಕ್ರಮೇಣ ಹೋಬಳಿಗೊಂದು ವಿಸ್ತರಿಸಲಾಗುವುದೆಂದೂ ಮಾತು ಕೊಟ್ಟಿದ್ದರು. ಆದರೆ ವಾಸ್ತವವಾಗಿ ಒಪ್ಪಿಕೊಂಡಂತೆ 175 ಶಾಲೆಗಳ ಬದಲು ಕೇವಲ 25 ವಿದ್ಯಾರ್ಥಿಗಳಿಗೆ ಅವಕಾಶವಿರುವ 25 ಶಾಲೆಗಳನ್ನು ಮಂಜೂರುಮಾಡಿ ತನ್ನ ನಾಲಗೆಯನ್ನು ಸುಳ್ಳಿನಲ್ಲಿ ಅದ್ದಿಕೊಂಡಿದೆ! ಈ ಶಾಲೆಗಳನ್ನೂ ಸಮಾಜ ಕಲ್ಯಾಣ ಇಲಾಖೆ ವಶಕ್ಕೆ ಕೊಟ್ಟಿದೆ. ಹಾಗಾಗಿ ಇವುಗಳ ಶೈಕ್ಷಣಿಕ ಗುಣಮಟ್ಟವನ್ನು ಯಾರೂ ನಿರೀಕ್ಷಿಸುವಂತಿಲ್ಲ.

ಆದ್ದರಿಂದ ತನ್ನದೇ ಆದ ಪರಿಸರದಲ್ಲಿ ಕೆಲಸ ಮಾಡಲು ಅನುಕೂಲವಾಗುವಂತೆ ವಸತಿ ಶಾಲೆಗಳಿಗೆ ಸಂಬಂಧಪಟ್ಟಂತೆ ಶಿಕ್ಷಣ ತಜ್ಞರ ಸಮಿತಿ ರಚಿಸಿ, ಅದರ ವರದಿ ಆಧಾರದ ಮೇಲೆ ಹೋಬಳಿಗೊಂದು ಕನಿಷ್ಟ 100 ಮಕ್ಕಳಿಗೆ ಅವಕಾಶವಿರುವ ವಸತಿ ಶಾಲೆಗಳನ್ನು ತೆರೆಯಲು ಸರ್ಕಾರವನ್ನು ದ.ಸಂ.ಸ. ಮತ್ತೆ ಒತ್ತಾಯಿಸುತ್ತದೆ.

1987ರ ಏಪ್ರಿಲ್ 14ರ ಅಂಬೇಡ್ಕರ್ ಜಯಂತಿಯ ಸಂದರ್ಭದಲ್ಲಿ ವಿಷದ ಹೆಂಡದ ವಿರುದ್ಧ ಕಾರ್ಯಕ್ರಮ ರೂಪಿಸಿ ರಾಜ್ಯಾದ್ಯಂತ ಸಭೆ ಮೆರವಣಿಗೆ ನಡೆಸುವುದರ ಮೂಲಕ ಸರ್ಕಾರಕ್ಕೆ ದ.ಸಂ.ಸ. ಮನವಿ ಸಲ್ಲಿಸಿತ್ತು. "ವಿಷದ ಹೆಂಡದ ಮಾರಾಟ ನಿಲ್ಲಿಸಿ, ಅಂಬೇಡ್ಕರ್ ಸಾಹಿತ್ಯವನ್ನು ಕನ್ನಡದಲ್ಲಿ ಪ್ರಕಟಿಸಿ" ಎಂಬ ಬೇಡಿಕೆಯನ್ನೂ ಈಡೇರಿಸುವಂತೆ ಒತ್ತಾಯಿಸಿತ್ತು. ಜನತಾ ಸರ್ಕಾರ ಏನೊಂದೂ ಮಾತನಾಡದೆ ಎಂದಿನಂತೆ ಹೆಂಡಕ್ಕೆ ಕ್ಲೋರಾಲ್ ಹೈಡ್ರೇಟ್ ಎಂಬ ರಾಸಾಯನಿಕ ವಿಷದ ಪುಡಿ ಬೆರೆಸಿ ಜನರಿಗೆ ಮಾರುತ್ತಿದೆ, ಅವರ ಆರೋಗ್ಯವನ್ನು ಪ್ರಪಾತಕ್ಕೆ ಒಯ್ಯುತ್ತಿದೆ. ಹೆಂಡದ ದೊರೆಗಳ ತಿಜೋರಿಗೆ ಮತ್ತಷ್ಟು ಬಂಡವಾಳ ತುಂಬುತ್ತಿದೆ.

ಯಾವುದೇ ಜನಪರ ಚಳುವಳಿಗಳನ್ನು ಕನಿಷ್ಠ ಗೌರವಗಳಿಂದ ಕಾಣಲಾರದ, ಅವರ ಬೇಡಿಕೆಗಳ ಬಗ್ಗೆ ನಿರ್ಲಕ್ಷ್ಯ ತಾಳುವ ಸರ್ಕಾರದ ಈ ಧೋರಣೆಯನ್ನು ದ.ಸಂ.ಸ. ಖಂಡಿಸಿದೆ.

ಹೆಗಡೆಯ ಹೆಂಡವನ್ನು ಹೆಗಡೆಗೆ ವಾಪಸ್ಸು ಕಳಿಸುವುದರ ಮೂಲಕ ಹಾಗೂ ಹೆಂಡ

ದೌರ್ಜನ್ಯಗಳಲ್ಲಿ ಶಾಸಕರ ಕೈವಾಡ

ಸರ್ಕಾರವೇ ಛೀಮಾರಿ ಹಾಕಲಿ

ಕುಡಿಯದಿರುವ ಪ್ರತಿಜ್ಞೆಯ ಮೂಲಕ ದ.ಸಂ.ಸ. ಹೆಂಡದ ಕೊಲೆಗುಡುಕ ರಾಜಕಾರಣಕ್ಕೆ ತೆರೆ ಎಳೆಯಲು ನಿರ್ಧರಿಸಿದೆ. •

ಸ್ವಾತಂತ್ರ್ಯಪೂರ್ವದಿಂದಲೂ ಸಾಮಾಜಿಕ, ಆರ್ಥಿಕವಾಗಿ ಹಿಂದುಳಿದು, ಅಸಮಾನತೆಯ ಮೂಲೆಯಲ್ಲಿ ಬದುಕು ನೂಕುತ್ತಿರುವ ಹರಿಜನರು ಸಂವಿಧಾನಾತ್ಮಕವಾದ ಹಕ್ಕುಗಳನ್ನು ಪಡೆದು ನಿರ್ಭೀತಿಯಿಂದ ಜೀವನ ಸಾಗಿಸಲು ಸಾಧ್ಯವಿಲ್ಲದಾಗಿದೆ. ದಿನನಿತ್ಯ ಇವರ ಮೇಲೆ ನಡೆಯುತ್ತಿರುವ ಹೇಯವಾದ ಕೃತ್ಯಗಳು, ಮಾನವೀಯತೆಯುಳ್ಳವರನ್ನು ನಾಚಿಸುವಂತೆ ಆಗಿದೆ. ಸಂವಿಧಾನದ ಹೊಣೆ ಹೊತ್ತ, ಹೊಣೆಯ ಅಧಿಕಾರಿಗಳ ವಿಫಲತೆಗೆ ರಾಯಚೂರು ಜಿಲ್ಲೆಯ ಮೆದಿಕನಾಳ, ಗಿಣಿಗೇರಾ ಮತ್ತು ಮೈಸೂರಿನ ಕಳಸ್ತವಾಡಿಯಲ್ಲಿ ಹರಿಜನರ ಮೇಲೆ ನಿರಂತರವಾಗಿ ನಡೆಯುತ್ತಿರುವ ದೌರ್ಜನ್ಯಗಳೇ ಸಾಕ್ಷಿಯಾಗಿದೆ.

ಹರಿಜನರ ಮೇಲೆ ನಡೆಯಬಹುದಾದ ಶೋಷಣೆ, ದಬ್ಬಾಳಿಕೆಯನ್ನು ಹತ್ತಿಕ್ಕಲು ಅಸ್ಪೃಶ್ಯತಾ ಅಪರಾಧ ನಿಷೇದ ಕಾಯ್ದೆ 1954 ರನ್ವಯ, ಕಾನೂನು ಕ್ರಮ ಕೈಗೊಳ್ಳಲು ಅವಕಾಶವಿದ್ದರೂ ಇಂದು ಈ ಕಾಯ್ದೆಯ ಅನ್ವಯ ಯಾವುದೇ ಅಪರಾಧಿಗೆ ಶಿಕ್ಷೆಯಾಗಿರುವ ಉದಾಹರಣೆಯೇ ಇಲ್ಲವೆನ್ನುವುದು ಸರ್ಕಾರದ ಅಂಕಿ ಅಂಶಗಳೇ ಎತ್ತಿ ತೋರಿಸುತ್ತದೆ.

ಸರ್ಕಾರವೂ ಈ ಜನಾಂಗಕ್ಕಾಗಿ ರಕ್ಷಣೆ ನೀಡಲು ಸಮಾಜ ಕಲ್ಯಾಣ ಇಲಾಖೆಯ ವ್ಯಾಪ್ತಿಯಲ್ಲಿ ಪ್ರತ್ಯೇಕ ಹಕ್ಕು ಸಂರಕ್ಷಣಾ ದಳವನ್ನು ಸ್ಥಾಪನೆ ಮಾಡಿರುವುದು. ಆ ದಳವು ಕೈಗೊಂಡ ತನಿಖೆಗಳಿಂದ ಅಪರಾಧ ಸಾಬೀತಾದರೂ, ಶಿಕ್ಷಿಸುವ ಅಥವಾ ನ್ಯಾಯಾಲಯಕ್ಕೆ ತಾವೇ ಅಪರಾಧ ಪಟ್ಟಿ (ಚಾರ್ಜ್ ಷೀಟ್) ಸಲ್ಲಿಸುವ ಅವಕಾಶವಿರುವುದಿಲ್ಲ. ರಾಜ್ಯದಾದ್ಯಂತ ಸರ್ಕಾರದ ಬಹುತೇಕ ಇಲಾಖೆಗಳಲ್ಲಿ ಖೋಟಾ ಜಾತಿ ಪತ್ರಗಳನ್ನು ಸಲ್ಲಿಸಿ, ಉನ್ನತ ಉದ್ಯೋಗಗಳನ್ನು ಪಡೆದವರನ್ನು ಕಂಡುಹಿಡಿದು ಸುಮಾರು 300ಕ್ಕೂ ಹೆಚ್ಚಿನ (ಪ್ರಕರಣಗಳನ್ನು ಬೆಳಕಿಗೆ ತಂದರೂ ಸಹಿತ ಸರ್ಕಾರವು ಯಾವುದೇ ಕ್ರಮ ಕೈಗೊಳ್ಳದೆ ಅಪರಾಧಿಗಳನ್ನು ರಕ್ಷಿಸುವ ಸಲುವಾಗಿ, ಮಾನ್ಯಮುಖ್ಯಮಂತ್ರಿಗಳು ಅಪರಾಧಿಗಳ ಮೇಲೆ ಕ್ರಮ ಜರುಗಿಸಬಾರದೆಂದುಆದೇಶ ನೀಡಿರುವುದು ಮೌಲ್ಯಾಧಾರಿತ ರಾಜಕಾರಣದ ನೀತಿಯು ಹೆಗ್ಗುರುತು. "1985ನೇ ಏಪ್ರಿಲ್ 14ರಂದು ಆಡಳಿತ ಹೃದಯದ ಕೇಂದ್ರವಾದ ವಿಧಾನಸೌಧದ ಎದುರಿನಲ್ಲಿ ಅಂಬೇಡ್ಕರ್ ಜಯಂತೋತ್ಸವದಂದು ಇಲಾಖೆಗೆ ಸಂಪೂರ್ಣ ಅಧಿಕಾರ ಕೊಡುವ ಭರವಸೆ ನೀಡಿದರೂ ಸಹ ಭರವಸೆಯನ್ನು ಈಡೇರಿಸಲೂ ಹಿಂದೆ ಮುಂದೆ ನೋಡುತ್ತಿರುವುದು ಇವರ ದಲಿತ ವಿರೋಧ ನೀತಿಯಾಗಿದೆ.

ತಾ : 21-7-87ರಂದು ಮಾನ್ಯ ಸಮಾಜ ಕಲ್ಯಾಣ ಸಚಿವರು ತೆಗೆದುಕೊಂಡಿರುವ ತೀರ್ಮಾನ ಅನುಮಾನಕ್ಕೆ ಆಸ್ಪದವಾಗಿದೆ. ಜಾತಿ ಪತ್ರಗಳಿಗೆ ಭಾವ ಚಿತ್ರ ಅಂಟಿಸಿ ಕೊಡುವುದು ಮತ್ತೆ ನವೀಕರಿಸುವಂತಿಲ್ಲ ಎಂಬ ವಿಚಾರದಿಂದ ಬಾರಿ ಅನ್ಯಾಯವಾಗುವ ಸಂಭವವಿದೆ. ಯಾರು ಬೇಕಾದರೂ ಜಾತಿ ಪತ್ರಗಳನ್ನು ಪಡೆಯಲು ಅಧಿಕಾರಿಗಳನ್ನು ಒಲಿಸಿಕೊಂಡರೆ ಶಾಶ್ವತ ಹರಿಜನರಾಗಬಹುದು. ಇದರಿಂದ ನಡೆಯಬಹುದಾದ ಅನ್ಯಾಯವನ್ನು ತಪ್ಪಿಸಲು ಅಧಿಕಾರಿಗಳು ಕೂಲಂಕುಶವಾದ ಪರಿಶೀಲನೆ ನಡೆಸಿ ಹರಿಜನ ಕುಟುಂಬಕ್ಕೊಂದರಂತೆ ಆಹಾರ ಪಡಿತರ ಚೀಟಿ ರೀತಿಯಲ್ಲಿ ಭಾವ ಚಿತ್ರಗಳನ್ನು ಅಂಟಿಸಿದ ಕಾರ್ಡುಗಳನ್ನು ನೀಡಿದರೆ (ವಂಶವೃಕ್ಷದ ಆಧಾರದ ಮೇಲೆ) ಕುಟುಂಬದ ಯಾವುದೇ ಸದಸ್ಯನಿಗೆ ಅದರ ಅವಶ್ಯಕತೆ ಇದ್ದಾಗ ಉಪಯೋಗಿಸಿಕೊಳ್ಳಬಹುದು, ಹಾಲಿ ಪಡೆದಿರುವ ಜಾತಿ ಪತ್ರಗಳನ್ನು ಸಂಪೂರ್ಣವಾಗಿ ನಿಷೇಧಿಸಬೇಕು.

ಖೋಟಾ ಜಾತಿ ಪತ್ರಗಳನ್ನು ಪಡೆದು ರಾಜಾರೋಷವಾಗಿ ಮೆರೆಯುತ್ತಿರುವವರನ್ನು ಪರೋಕ್ಷವಾಗಿ ರಕ್ಷಿಸುವ ಕುತಂತ್ರವಾಗುತ್ತದೆ. ಕಾರಣ ಹಾಲಿ ಜಾತಿ ಪತ್ರಗಳು ಜಾರಿಯಲ್ಲಿದ್ದರೆ ಖೋಟಾ ಜಾತಿವಾದಿಗಳ ಮೇಲೆ ಕ್ರಮ ಕೈಗೊಳ್ಳಲು ಮರೆತಂತಾಗುತ್ತದೆ.

ಖೋಟಾ ಜಾತಿ ಪತ್ರದ ಆಧಾರದ ಮೇಲೆ ಉದ್ಯೋಗದಲ್ಲಿರುವವರನ್ನು ಶಿಕ್ಷಿಸಲೇಬೇಕು. ಅಂಥವರ ಭಾವ ಚಿತ್ರಗಳನ್ನು ಖ್ಯಾತ ಪತ್ರಿಕೆಗಳಲ್ಲಿ ಪ್ರಕಟಿಸಿದರೆ ಮುಂದೆಯಾದರೂ ನಡೆಯುಬಹುದಾದ ಅನ್ಯಾಯವನ್ನು ತಪ್ಪಿಸಬಹುದು.

ಹಕ್ಕು ಸಂರಕ್ಷಣಾದಳಕ್ಕೆ ಅಧಿಕಾರ ಕೊಡುವ ಮನಸ್ಸು ಇಲ್ಲವೆಂದರೆ ಈ ಇಲಾಖೆಯನ್ನೇ ರದ್ದು ಮಾಡಿದರೆ ಬಹುಶಃ ಆರ್ಥಿಕವಾಗಿ ದಿವಾಳಿಯಾಗಿರುವ ಸರ್ಕಾರವು ದಿವಾಳಿತನವನ್ನು ಒಂದಷ್ಟು ಸರಿದೂಗಿಸಿಕೊಳ್ಳಬಹುದು.

ಗ್ರಾಮಾಂತರ ಪ್ರದೇಶಗಳಲ್ಲಿ ಹರಿಜನರ ಮೇಲೆ ನಡೆಯಬಹುದಾದ ದೌರ್ಜನ್ಯಗಳಿಗೆ ತಾಲ್ಲೂಕು ಪೊಲೀಸ್ ಅಧಿಕಾರಿಗಳನ್ನೇ ಹೊಣೆಯಾಗಿ ಮಾಡುವ ಯೋಜನೆ ಸ್ವಾಗತಕರವಾದುದು. ಜೊತೆಗೆ ಹರಿಜನರ ಮೇಲೆ ನಡೆಯುಬಹುದಾದ ದೌರ್ಜನ್ಯಗಳಲ್ಲಿ ಸ್ಥಳೀಯ ಶಾಸಕರುಗಳ ಕೈವಾಡ ಕಂಡುಬಂದಲ್ಲಿ, ಸರ್ಕಾರವು ಅಂತಃ ಶಾಸಕರುಗಳಿಗೆ ಬಹಿರಂಗವಾಗಿ ಛೀಮಾರಿ ಹಾಕುವ ಯೋಜನೆ ಕಾರ್ಯರೂಪಕ್ಕೆ ತಂದರೆ ಬಹುತೇಕ ಸಮಸ್ಯೆಗಳು ಸುಲಭವಾಗಿ ಬಗೆಹರಿಯುತ್ತವೆ.

ಪರಿಶಿಷ್ಟ ಜಾತಿ, ಪರಿಶಿಷ್ಟವರ್ಗ ಕ್ಷೇಮಾಭಿವೃದ್ಧಿ ಇಲಾಖೆಗೆ ಸಮಾಜ ಕಲ್ಯಾಣ ಇಲಾಖೆ ಎಂದು ಪುನರ್ ನಾಮಕರಣ ಮಾಡುವುದು ಸಾಮಾನ್ಯ ಜನರಿಗೊಂದು ಗೊಂದಲಮಯವಾದ ವಿಷಯ. ನೂತನವಾಗಿ ಅಧಿಕಾರ ವಹಿಸಿಕೊಂಡ ಪ್ರತಿಯೊಬ್ಬ ಮಂತ್ರಿಯೂ ಸಹ ಈ ರೀತಿ ಯೋಚನೆ ಮಾಡುತ್ತಾ ಹೋದರೆ ಸಾಮಾನ್ಯ ಜನರಿಗೆ ಇಲಾಖೆಯೇ ಮರೆತು ಹೋಗಬಹುದು. ಇದನ್ನು ಕೈಬಿಡುವುದು ಒಳ್ಳೆಯದು.

ಹಾಲಿ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಗೊಬ್ಬರು ರಾಜ್ಯ ಸಚಿವರನ್ನು ನೇಮಿಸಿರುವಾಗ ಅವರಿಗೇಕೆ ಪೂರ್ಣ ಅಧಿಕಾರ (ಸ್ವತಂತ್ರ) ಕೊಡಬಾರದು. ಯಾವುನೇ ಉನ್ನತ ತೀರ್ಮಾನ ಕೈಗೊಳ್ಳಬೇಕಾದರೆ ಸಚಿವ ಸಂಪುಟ ಮಂತ್ರಿಯನ್ನು ಅವಲಂಬಿಸುವುದು ಸಮಂಜಸವಾದುದಲ್ಲ. ಕೊಳೆತು ನಾರುತ್ತಿರುವ ಈ ಇಲಾಖೆಗೆ ಪ್ರಗತಿಪರ ರೂಪ ದೊರೆಯಬೇಕಾದರೆ ಸ್ವತಂತ್ರ ಅಧಿಕಾರ ಕೊಡುವುದು ಒಳಿತಾಗುತ್ತದೆ.

• ದೊಡ್ಡೆಲ್ಲಪ್ಪ
ಮಾರಗೊಂಡನ ಹಳ್ಳಿ

ಎರಡು ಉಪನ್ಯಾಸಗಳು

ಭಾರತದ ಬೌದ್ಧಿಕ ದಾರಿದ್ರ್ಯ

ಮೂಲ: ವಿ. ಆರ್. ನಾರ್ಲ

ಅನು: ಗಂಗಾಧರಮೂರ್ತಿ

6

ಪ್ರಾಚೀನ ಮತ್ತು ಮಧ್ಯಕಾಲ

ಇಸ್ಲಾಂ ಜಗತ್ತಿನೊಂದಿಗೆ ಉಂಟಾದ ಸಂಪರ್ಕದಿಂದಾಗಿ ಯೂರೋಪಿಗೆ ತನ್ನ ಅಂಧ ಕಾರಯುಗವನ್ನು ನಿವಾರಿಸಿಕೊಳ್ಳಲು ಪ್ರೇರಣೆ ದೊರಕಿತು. ಆದರೆ ಈ ರೀತಿಯ ಪರಿಣಾಮ ನಮ್ಮಲ್ಲಿ ಉಂಟಾಗದಿರಲು ಕಾರಣವೇನು ? ಇಸ್ಲಾಂ ಸಂಸ್ಕೃತಿಯೊಂದಿಗೆ ನೇರ ಸಂಪರ್ಕವು ಸಾಧ್ಯವಾಗುವ ಕಾಲಕ್ಕೆ ಆ ಧರ್ಮವು ತನ್ನ ಕ್ರಿಯಾಶೀಲತೆಯನ್ನು ಕಳೆದುಕೊಂಡು ಬಿಟ್ಟಿತ್ತೇ ಅಥವಾ ಆ ಕಾಲಕ್ಕಾಗಲೇ ನಮ್ಮ ಮನಸ್ಸುಗಳನ್ನು ಮುಚ್ಚಿಕೊಂಡುಬಿಟ್ಟಿದ್ದೆವೇ? ಪ್ರಸಿದ್ಧ ಮುಸ್ಲಿಂವಿಧ್ವಾಂಸನಾದ, ಹದಿನೈದನೇ ಶತಮಾನದ ಪೂರ್ವಾರ್ಧದಲ್ಲಿ ನಮ್ಮ ದೇಶಕ್ಕೆ ಭೇಟಿನೀಡಿದ್ದ, ಅಲ್ಬರನಿಯ ದಾಖಲೆಯಂತೆ ನಾವು ಅವನಿಗೆ ಒಮ್ಮೆ ಅಪ್ರಮಾಣಿಕರೂ ಅಂಜುಬುರುಕರೂ ಆಗಿ ಕಂಡರೆ ಮತ್ತೊಮ್ಮೆ ಅತ್ಯಂತ ಧೂರ್ತರೂ, ಭಂಡರೂ ಆಗಿ ಕಂಡುಬರುತ್ತೇವೆ. ನಮ್ಮ ಅಹಂಭಾವವನ್ನು ಕುರಿತು ಅವನು ಹೇಳುವ ಮಾತುಗಳನ್ನು ಗಮನಿಸಬಹುದು: "ಹಿಂದೂಗಳ ನಂಬಿಕೆಯ ಪ್ರಕಾರ ದೇಶವೆಂದರೆ ಇರುವುದೊಂದೆ–ಅದು ಅವರದು; ಅವರದರಂತಹ ದೇಶವಿಲ್ಲ, ಅವರಂತಹ ರಾಜರುಗಳಿಲ್ಲ, ಅವರಂತಹ ಧರ್ಮವಿಲ್ಲ, ಅವರದ್ದಕ್ಕೆ ಸರಿಸಮವಾದ ವಿಜ್ಞಾನವಿಲ್ಲ. ಅವರು ಮಹಾ ಗರ್ವಿಗಳು. ಮೂರ್ಖತನ ಎನ್ನುವ ಮಟ್ಟಿಗೆ ಪೊಳ್ಳುತನವುಳ್ಳವರು, ಅಹಂಕಾರಿಗಳು ಮತ್ತು ಜಡಸ್ವಭಾವದವರು. ಅವರು ತಮಗೆ ಗೊತ್ತಿರುವುದನ್ನು ಸ್ವಭಾವತ: ರಹಸ್ಯವಾಗಿ ಇಡಲು ಬಯಸುತ್ತಾರೆ; ತಮ್ಮ ದೇಶದವರೇ ಆದ ಇತರ ಜಾತಿಯವರಿಗೆ ಅದರಲ್ಲೂ ಹೊರಗಿನವರಿಗೆ ಏನನ್ನೂ ತಿಳಿಸದಂತೆ ಎಚ್ಚರವಹಿಸುತ್ತಾರೆ. ಅವರ ನಂಬಿಕೆಯ ಪ್ರಕಾರ ಭೂಮಂಡಲವೆಂದರೆ ಅವರ ದೇಶವೇ ಮಾನವಕುಲವೆಂದರೆ ಅವರೇ; ಬೇರೆ ಯಾವ ಮಾನವ ಪ್ರಾಣಿಗೂ ಜ್ಞಾನ–ವಿಜ್ಞಾನದ ಗಂಧವಿಲ್ಲ. 'ಕುರಾಸನ್' ಮತ್ತು 'ಪಾರ್ಸಿಸ್' ಗಳಲ್ಲೂ ವಿಜ್ಞಾನಿಗಳೂ, ವಿಧ್ವಾಂಸರೂ ಇದ್ದಾರೆ ಎಂದು ಹೇಳಿದರೆ ನಿಮ್ಮನ್ನು ಸುಳ್ಳನೆಂದೂ ದಡ್ಡನೆಂದೂ ಪರಿಗಣಿಸುವಷ್ಟು ಉದ್ಧಟರು ಅವರು.47 ನಮ್ಮ ಅಂಜುಬರುಕುತನದ ಬಗ್ಗೆ ಅಲ್ಬರುನಿಯ ಅಭಿಪ್ರಾಯಗಳನ್ನು (ಇಂಗ್ಲಿಷ್ ಅನುವಾದ : ಇ.ನಿ. ಸಚು) ಪರಿಶೀಲಿಸುವುದು ಸೂಕ್ತ.

"ಬ್ರಹ್ಮಗುಪ್ತನು ಗ್ರಹಣದ ಬಗ್ಗೆ ಎರಡು ಸಿದ್ಧಾಂತಗಳನ್ನು ಹೇಳಿದ್ದಾನೆ. ರಾವು ಸೂರ್ಯನನ್ನು ನುಂಗುತ್ತಾನೆ ಎನ್ನುವ ಜನಪ್ರಿಯ ದೃಷ್ಟಿಕೋನ ಮೊದಲನೆಯದು; ಎರಡನೆಯದು, ವೈಜ್ಞಾನಿಕ ದೃಷ್ಟಿಕೋನ ಎನ್ನಬಹುದಾದ್ದು. ಹೀಗೆ ದ್ವಂದ್ವ ನಿಲುವಿನಿಂದಾಗಿ ಅವನು ಪುರೋಹಿತಶಾಹಿಯನ್ನು ಉತ್ತೇಜಿಸುವ ಸಿದ್ಧಾಂತದಿಂದ 'ಆತ್ಮದ್ರೋಹ' ಮಾಡಿದ್ದಾನೆ. ಒಪ್ಪಿತ ಧೋರಣೆಗಳೊಂದಿಗೆ ಸಂಘರ್ಷಕ್ಕಿಳಿದ ಸಾಕ್ರೆಟಿಸನಿಗೆ ಒದಗಿದ ದುರಂತದಂತಹ ಪರಿಸ್ಥಿತಿಯಿಂದ ಬಹುಶಃ ಅವನು ಭಯಭೀತನಾಗಿದ್ದನು ಎನ್ನಿಸುತ್ತಿದೆ".48

ಇಸ್ಲಾಂಧರ್ಮದೊಂದಿಗಿನ ದೀರ್ಘಕಾಲದ ಸಂಪರ್ಕದಿಂದಾಗಿ ಹಿಂದೂ ಸಂಸ್ಕೃತಿ ಪ್ರಭಾವಿತವಾಗಲೇ ಇಲ್ಲ ಎನ್ನುವುದು ದಡ್ಡತನವಾಗುತ್ತದೆ. ಆದರೆ ಈ ಸಂಪರ್ಕದ ಪರಿಣಾಮವಾಗಿ ಈ ಎರಡೂ ಸಂಸ್ಕೃತಿಗಳು ಆಯಾಧರ್ಮದ ಅನಿಷ್ಟಗುಣವನ್ನು ಪರಸ್ಪರ ಹಂಚಿಕೊಂಡವೇ ಹೊರತು ಉದಾತ್ತ ಗುಣಗಳನ್ನಲ್ಲ. ಈ ಪ್ರಕ್ರಿಯೆ ಇಲ್ಲಿಗೆ ವಿಶಿಷ್ಟವಾದದ್ದೇನಲ್ಲ. ಬರ್ಟ್ರಾಂಡ್ ರಸೆಲ್ ಹೇಳುವಂತೆ "ಮಂಚೂಗಳು 17ನೇ ಶತಮಾನದಲ್ಲಿ ಚೀನವನ್ನು ಆಕ್ರಮಿಸಿದಾಗ ಆ ದೇಶದ ಸ್ತ್ರೀಯರು ಪಾದಗಳನ್ನು ಚಿಕ್ಕದನ್ನಾಗಿಸಿಕೊಳ್ಳುವುದು ಮತ್ತು ಮಂಚೂಪುರುಷರು ಜಡೆಗಳನ್ನು ಹೊಂದಿರುವುದು ಪದ್ಧತಿಯಾಗಿತ್ತು. ಈ ಮೂರ್ಖ ಪದ್ಧತಿಗಳನ್ನು ಕೈಬಿಡುವ ಬದಲು ಈ ಎರಡೂ ಗುಂಪುಗಳು ಅದನ್ನು ಪರಸ್ಪರ ಎರವಲು ಪಡೆಯಲಾರಂಭಿಸಿದವು.49 ನನ್ನ ಮನಸ್ಸಿಗೆ ತತ್‌ಕ್ಷಣ ಹೊಳೆಯುವ, ಇದಕ್ಕೆ ಸಮನಾದ, ಉದಾಹರಣೆಯೆಂದರೆ ಪರದಾ ಪದ್ಧತಿಯನ್ನು ಹಿಂದುಗಳೂ, ಜಾತಿಪದ್ಧತಿಯನ್ನು ಮುಸ್ಲಿಮರೂ ಅಳವಡಿಸಿಕೊಂಡದ್ದು.

> **ಹಿಂದೂಗಳ ನಂಬಿಕೆಯ ಪ್ರಕಾರ ದೇಶವೆಂದರೆ ಇರುವುದೊಂದೇ - ಅದು ಅವರದು. ಭೂಮಂಡಲವೆಂದರೆ ಅವರ ದೇಶವೇ ಮಾನವ ಕುಲವೆಂದರೆ ಅವರೇ.**

ಪ್ರಸ್ತುತದಲ್ಲಿ ನಿಂತು ಮೂರು ಸಾವಿರ ವರ್ಷಗಳ ಕಾಲಾವಧಿಯನ್ನು ಹಿಂತಿರುಗಿ ನೋಡಿದಾಗ ಉದ್ದಾಲಕನ ಬದಲಿಗೆ ರಾಷ್ಟ್ರೀಯ ತತ್ವಜ್ಞಾನಿಯನ್ನಾಗಿ ಯಾಜ್ಞವಲ್ಕ್ಯನನ್ನು ಆಯ್ಕೆಮಾಡಿಕೊಂಡದ್ದು ನಮ್ಮ ಬೌದ್ಧಿಕ ಇತಿಹಾಸದಲ್ಲಿ ನಾವು ತುಳಿದ ತಪ್ಪು ಹೆಜ್ಜೆ ಎಂದು ಕಂಡುಬರುತ್ತದೆ. ಯಾಜ್ಞವಲ್ಕ್ಯನು ರಹಸ್ಯವಾದಿಯೂ ಸೂತ್ರಾಂಧನೂ ಅಹಂಕಾರಿಯೂ ಆಗಿದ್ದರೆ, ಉದ್ದಾಲಕನು ತೆರೆದ ಮನಸ್ಸಿನವನೂ ಪ್ರಯೋಗಶೀಲನೂ ಆಗಿದ್ದು ಯಾವ ವಿಷಯದಲ್ಲೂ ಚರ್ಚೆಗೆ ಸಿದ್ಧನಾಗಿದ್ದ. ಯಾಜ್ಞವಲ್ಕ್ಯನಿಗೆ ಆತ್ಮವು ಸತ್ಯವಾಗಿದ್ದರೂ ಗೋವುಗಳ ಕೊಂಬಿಗೆ ಕಟ್ಟಿದ ಚಿನ್ನದ ಪಾಡಗಳು ವಾಸ್ತವವಾಗಿದ್ದವು. ಆದರೆ ಜಗತ್ತು ಮಾತ್ರ ಮಿಥ್ಯೆಯಾಗಿತ್ತು. ಉದ್ದಾಲಕನಿಗೆ ಇರುವುದೆಲ್ಲವೂ ವಾಸ್ತವವಾಗಿತ್ತು; ಇರುವುದೆಲ್ಲದಕ್ಕೂ ಬೌದ್ಧಿಕ ನೆಲೆಯಿತ್ತು. ಯಾಜ್ಞವಲ್ಕ್ಯನ ದೃಷ್ಟಿಯಲ್ಲಿ ಜೀವನವೆಂದರೆ ಘಟವನ್ನು ನುಡಿಸುವುದರಿಂದ ಉದ್ಭವಿಸುವ ಗ್ರಹ್ಯಾತೀತ ಶಬ್ದದಂತಿದ್ದು ನಮ್ಮ ಅರಿವಿಗೆ ಮೀರಿದ್ದು. ಉದ್ದಾಲಕನ ದೃಷ್ಟಿಯಲ್ಲಿ ಘಟವಿಲ್ಲದೆ ಶಬ್ದ ಹೇಗೆ ಇಲ್ಲವೋ ಹಾಗೆಯೇ ಭೌತಿಕವಾಗಿಯಲ್ಲದೆ ಅಸ್ತಿತ್ವವಿಲ್ಲ. ಒಟ್ಟಾರೆ ಯಾಜ್ಞವಲ್ಕ್ಯನು ಶಬ್ದಗಳೊಂದಿಗೆ ದೊಂಬರಾಟವಾಡಿದರೆ, ಉದ್ದಾಲಕನು ವೈಜ್ಞಾನಿಕ ಚೇತನವನ್ನು ಪ್ರತಿನಿಧಿಸುವ ತತ್ವಜ್ಞಾನಿ.

ರಾಜ ಮಹಾರಾಜರುಗಳು ಆದರ್ಶವಾದೀ ತತ್ವಜ್ಞಾನವನ್ನು ಕಟ್ಟಿ ಬೆಳೆಸಲು ಮೂಲತಃ ಕಂಕಣಬದ್ಧರಾಗಿದ್ದ ಕಾಲದಲ್ಲಿ "ನಾಸ್ತಿಯೇ ಅಸ್ತಿತ್ವದ ಮೂಲ ಎಂದು ಹೇಳುತ್ತೀರಿ. ನಾಸ್ತಿಯಾಗಿರುವುದು ಅಸ್ತಿತ್ವದಲ್ಲಿರಲು ಹೇಗೆ ಸಾಧ್ಯ ? ಅಸ್ತಿತ್ವವೇ ಪ್ರಾರಂಭ" ಎಂದು ಅವರನ್ನು ಎದುರುಹಾಕಿಕೊಳ್ಳುವ ಪ್ರಶ್ನೆಗಳನ್ನು ಕೇಳುವ ಭೌದ್ಧಿಕ ಪ್ರಾಮಾಣಿಕತೆ ಹಾಗೂ ವೈಚಾರಿಕ ಎದೆಗಾರಿಕೆಯನ್ನು ಹೊಂದಿದ್ದವನು ಉದ್ದಾಲಕ. ಆದ್ದರಿಂದಲೇ ಉದ್ದಾಲಕನು ವೈಜ್ಞಾನಿಕ ಮನೋಭಾವದ ಜಗತ್ತನ್ನು.ಜೀವನವನ್ನು ಗುಣಾತ್ಮಕವಾಗಿ ನೋಡುವ ನಮ್ಮ ಮೊದಲ ಆಶಾವಾದಿ ತತ್ವಜ್ಞಾನಿ.

ನಾವು ಯಾಜ್ಞವಲ್ಕ್ಯನನ್ನು ಅನುಸರಿಸದೆ ಉದ್ದಾಲಕನನ್ನು ಅನುಸರಿಸಿದ್ದರೆ, ನಮ್ಮ ಬೌದ್ಧಿಕ ಇತಿಹಾಸವು ಎಷ್ಟು ಉಜ್ವಲವಾಗುತ್ತಿತ್ತು, ಅರ್ಥಪೂರ್ಣವಾಗುತ್ತಿತ್ತು ಹಾಗೂ ನಾವು ಎಂತಹ ಸಾಧನೆಯನ್ನು ಮಾಡಬಹುದಾಗಿತ್ತು ಎನಿಸುತ್ತದೆ. ●

ಉಪನ್ಯಾಸ : ಎರಡು

ಭಾರತದ ಬೌದ್ಧಿಕ ದಾರಿದ್ರ್ಯ

ಆಧುನಿಕ ಕಾಲ

ಸುಮಾರು 3000 ವರ್ಷಗಳ ಹಿಂದೆ ಉದ್ದಾಲಕನಿಗೆ ಬದಲಾಗಿ ಯಾಜ್ಞವಲ್ಕ್ಯನನ್ನು ನಮ್ಮ ರಾಷ್ಟ್ರೀಯ ತತ್ವಜ್ಞಾನಿಯಾಗಿ ಆಯ್ಕೆ ಮಾಡಿದ್ದು ನಮ್ಮ ಬೌದ್ಧಿಕ ಇತಿಹಾಸದ ತಪ್ಪು ತಿರುವು ಎಂದು ಆಗಲೇ ಹೇಳಿದೆ. ಹಾಗೆಯೇ ನಮ್ಮ ಆಧುನಿಕ ಇತಿಹಾಸದ ಪ್ರಾರಂಭದಲ್ಲಿ ಕೂಡ ಇದೇ ರೀತಿಯ ತಪ್ಪು ಆಯ್ಕೆಯನ್ನು ಮಾಡಿದ್ದೇವೆ ಎನ್ನುವ ಅಭಿಪ್ರಾಯ ನನ್ನದು. ಆಧುನಿಕ ಯುಗಕ್ಕೆ ಸದ್ಯದ ಹೆಜ್ಜೆಗಳನ್ನಿಡಬೇಕು ಎನ್ನುವ ನಿರ್ಧಾರ ನಮ್ಮದಾಗಿದ್ದಿದ್ದರೆ ನಾವು ರಾಜಾರಾಂ ಮೋಹನ್‌ರಾಯ್ ಅವರ ಬದಲಿಗೆ ದೆರೋಜಿಯೋ ಅವರನ್ನು ಆಯ್ಕೆ ಮಾಡಬೇಕಾಗಿತ್ತು.

ಈ ಹೆಸರನ್ನು ಕೇಳಿಯೇ ಇವನು ಯಾರು? ಎನ್ನುವ ಬಗ್ಗೆ ನಿಮಗೆ ಆಶ್ಚರ್ಯವಾಗಬಹುದು. ಒಬ್ಬ ದಿಟ್ಟ ಚಿಂತಕನಾದ, ಪ್ರತಿಭಾವಂತ ಕವಿಯಾದ, ಮನಸ್ಸನ್ನು ಸೆರೆ ಹಿಡಿಯಬಲ್ಲ ಅಧ್ಯಾಪಕನಾದ, ದೇಶನಿಷ್ಠನಾದ ಇವನನ್ನು ನಾವು ಸಂಪೂರ್ಣ ಮರೆತೇ ಬಿಟ್ಟಿದ್ದೇವೆ. ಅವನು ಬದುಕಿದ್ದು ಕೇವಲ ಇಪ್ಪತ್ತೆರಡು ವರ್ಷಗಳು ಮಾತ್ರ. ಎಳೆಯ ವಯಸ್ಸಿನಲ್ಲಿ ಸತ್ತರೂ ಅವನನ್ನು, ಅವನ ಕೃತಿಗಳನ್ನು ಮೌನದಿಂದ ನಿರ್ಲಕ್ಷಿಸುವುದಕ್ಕಾಗಲೀ ಯಾಂತ್ರಿಕವಾಗಿ ಮಾತ್ರವೇ ಸ್ಮರಿಸುವುದಕ್ಕಾಗಲೀ ಕಾರಣವಿಲ್ಲ.

ಪೋರ್ಚುಗೀಸ್ ಕುಟುಂಬಕ್ಕೆ ಸೇರಿದ ಈತ ಏಪ್ರಿಲ್ 10, 1809 ರಂದು ಕಲ್ಕತ್ತದಲ್ಲಿ ಹುಟ್ಟಿದ. ಜಗತ್ತಿನ ಕೆಲವು ಪ್ರಮುಖ ವ್ಯಕ್ತಿಗಳಾದ ಡಾರ್ವಿನ್, ಲಿಂಕನ್, ಗ್ಲಾಡ್‌ಸ್ಟೋನ್, ಟೆನಿಸನ್, ಪೋ, ಹಾಗೂ ಆಲಿವರ್ ವೆಂಡರ್ ಹೋಮ್ಸ್‌ರಂತಹ ವಿಖ್ಯಾತರು ಹುಟ್ಟಿದ ವರ್ಷದಲ್ಲೇ ಹುಟ್ಟಿದ ದೆರೋಜಿಯೋ ಪ್ರತಿಭೆಯು ಅರಳುವಷ್ಟು ಕಾಲ ಬದುಕಿದ್ದರೆ ಬಹುಶಃ ಇಂತಹ ಅಮರ ಜೀವಿಗಳ ಸಾಲಿಗೆ ಸೇರುತ್ತಿದ್ದನೇನೋ. ಅವನ ಜೀವನ ಚರಿತ್ರೆಯನ್ನು ಸಂಪೂರ್ಣವಾಗಿ ನೀವು ತಿಳಿದುಕೊಳ್ಳಬೇಕು ಎನ್ನುವ ಆಕಾಂಕ್ಷೆ ನನಗಿದ್ದರೂ ಈ ಅವಕಾಶವನ್ನು ಅದಕ್ಕೆ ಬಳಸಿಕೊಳ್ಳುವುದು ಸರಿಯಲ್ಲ. ಆದ್ದರಿಂದ ಅವನಿಗೆ ಸಂಬಂಧಿಸಿದ ಈ ಕೆಳಗಿನ ಕೆಲವು ಅಂಶಗಳನ್ನು ಮಾತ್ರ ನಿಮ್ಮ ಗಮನಕ್ಕೆ ತರಲು ಇಚ್ಛಿಸುತ್ತೇನೆ. ಅವನು ಕವಿಯೂ, ಮುಕ್ತಚಿಂತಕನೂ ಆದ ಡೇವಿಡ್ ಡ್ರುಮಾಂಡ್ ನಡೆಸುತ್ತಿದ್ದ ಖಾಸಗೀ ಶಾಲೆಯಲ್ಲಿ ಓದಿದ. ಈ ಅಧ್ಯಾಪಕನ ಪ್ರೀತಿ ಹಾಗೂ ಮಾರ್ಗದರ್ಶನದಲ್ಲಿ ದೆರೋಜಿಯೋ ಕೂಡ ಕವಿಯಾಗಿ ಅರಳಿದ. ಮುಕ್ತಚಿಂತಕನಾಗಿ ಬೆಳೆದ. ಕೇವಲ 17 ವರ್ಷದವನಾಗಿದ್ದಾಗಲೇ ಆಗತಾನೆ ಹೊಸದಾಗಿ ಪ್ರಾರಂಭವಾಗಿದ್ದ ಹಿಂದೂ ಕಾಲೇಜಿನಲ್ಲಿ ಅವನನ್ನು ಉಪನ್ಯಾಸಕನನ್ನಾಗಿ ನೇಮಕ ಮಾಡಿದರು ಎಂದರೆ ಅವನ ಪ್ರತಿಭಾಶಕ್ತಿ ಎಂತಹುದು ಎನ್ನುವುದನ್ನು ಊಹಿಸಬಹುದು.

ಆದರೆ ಮೂರೇ ವರ್ಷದ ನಂತರ ಅವನನ್ನು ಕೆಲಸದಿಂದ ತೆಗೆದು ಹಾಕಲಾಯ್ತು. ಅವನು ಅಧ್ಯಾಪಕನಕೆಲಸಕ್ಕೆ ಅನರ್ಹನೆಂದೇ? ಅಲ್ಲ. ಉಪನ್ಯಾಸಕನಾಗಿ ಅವನು ವಿದ್ಯಾರ್ಥಿಗಳನ್ನು ಮಂತ್ರಮುಗ್ಧಗೊಳಿಸಿ ಆಕರ್ಷಿಸುವಂತಹವನಾಗಿದ್ದ, ವಿದ್ಯಾರ್ಥಿಗಳ ಪ್ರೀತಿಗೆ ಆದರಕ್ಕೆ ಪಾತ್ರನಾಗಿದ್ದ. ಹಿಂದೂ ಕಾಲೇಜಿನಲ್ಲಿ ಅತಿಥಿ ಪ್ರಾಚಾರ್ಯನಾಗಿದ್ದ ಸಂಸ್ಕೃತ ವಿದ್ವಾಂಸನೂ, ಇತಿಹಾಸಕಾರನೂ ಆದ ಎಚ್.ಎಚ್. ವಿಲ್ಸನ್, "ದೆರೋಜಿಯೋ ಇತಿಹಾಸವನ್ನು ತತ್ವಜ್ಞಾನಿಯ ಚಿಂತನ ಕ್ರಮದಿಂದ ಬೋಧಿಸುವಂತಹವನಾಗಿದ್ದ" ಎಂದು ಹಲವಾರು ಭಾರಿ ಹೇಳುತ್ತಿದ್ದ. ದೆರೋಜಿಯೋನ **ಇಮ್ಯಾನುಯಲ್ ಕಾಂಟ್‌ನ ತತ್ವಶಾಸ್ತ್ರದ ಬಗೆಗಿನ ಭಿನ್ನಾಭಿಪ್ರಾಯಗಳು** ಎಂಬ ಕೃತಿಯನ್ನು ಕುರಿತು ರೆವರೆಂಡ್ ಡಬ್ಲ್ಯು. ಎಚ್. ಮಿಲ್ ತುಂಬಿದ ಸಭೆಯಲ್ಲಿ ಹೇಳಿದ್ದು ಈಗ ನೆನಪಾಗುತ್ತದೆ. ಅವರ ಪ್ರಕಾರ "ದೆರೋಜಿಯೋನ ವಿಚಾರಗಳು ಸಂಪೂರ್ಣ ಅಸಲುತನದಿಂದ ಕೂಡಿದ್ದುದು ಮಾತ್ರವಲ್ಲದೇ ಪ್ರತಿಭಾವಂತ ತತ್ವಜ್ಞಾನಿಗಳನ್ನು ಕೂಡ ಪುನರ್ ಪರಿಶೀಲನೆಗೆ ಗುರಿಮಾಡುವ ಪರಿವೀಕ್ಷಣೆ ಮತ್ತು ವೈಚಾರಿಕತೆಯ ಶಕ್ತಿಯನ್ನು ಹೊಂದಿದ್ದವು" ಅಧ್ಯಾಪಕನಾಗಿ ಕೂಡ ಅವನು ದೊಡ್ಡ ಯಶಸ್ಸನ್ನೂ ಗಳಿಸಿದ್ದ. ಆದರೆ ಹಿಂದೂ ಕಾಲೇಜಿನ ಆಡಳಿತ ವರ್ಗವು ಅವನ ಬಗ್ಗೆ ವಿರೋಧ ವ್ಯಕ್ತಪಡಿಸಿದ್ದೂ ಅಲ್ಲದೆ

"ದೆರೋಜಿಯೋನ ವಿಚಾರಗಳು ಸಂಪೂರ್ಣ ಅಸಲುತನದಿಂದ ಕೂಡಿದ್ದುದು ಮಾತ್ರವಲ್ಲದೇ ಪ್ರತಿಭಾವಂತ ತತ್ವಜ್ಞಾನಿಗಳನ್ನು ಕೂಡ ಪುನರ್ ಪರಿಶೀಲನೆಗೆ ಗುರಿ ಮಾಡುವಂತಿದ್ದವು.

ಅವನು ನಂಬಿದ ಜೀವನ ಧ್ಯೇಯಗಳಿಗೆ ಏಕಾಏಕಿ ಪೆಟ್ಟುಕೊಡುವುದರ ಮೂಲಕ ಅವನನ್ನು ಶೋಚನೀಯವಾದ ದುರಂತಕ್ಕೆ ತಳ್ಳಿತು. ಇದಕ್ಕೆ ಕಾರಣವೇನು ? ವಿಲ್ಸನ್ ಕೂಡ ಅವನನ್ನು ಕೆಲಸದಿಂದ ತೆಗೆದುಹಾಕುವ ನಿರ್ಧಾರವನ್ನು ಅನುಮೋದಿಸುವ ಕಾರಣವೇನಿತ್ತು? ಉತ್ತರ ತುಂಬ ಸರಳ. ವೈಜ್ಞಾನಿಕ ಮನೋಭಾವದ ದೆರೋಜಿಯೋ ಬೇಕನ್ನನ (Bacon) ಅಭಿಮಾನಿಯಾಗಿದ್ದ. ಸಾಕ್ಷ್ಯವಾದಿಗಳ ಬೆಂಬಲಿಗನಾಗಿ ಅವನು ಲೋಕ್ (Locke) ನನ್ನು ಗೌರವಿಸಿದ, ತಾತ್ವಿಕ ಜಿಜ್ಞಾಸೆಯ ಅನುಮೋದಕನಾಗಿ ಹ್ಯೂಂ (Hume)ಅವನಿಗೆ ಮೆಚ್ಚುಗೆಯವನಾಗಿದ್ದ. ಮುಕ್ತ ವಿಚಾರಧಾರೆಯಲ್ಲಿ ವಿಶ್ವಾಸವಿಟ್ಟವನಾದುದರಿಂದ ಅವನಿಗೆ ವಾಲ್ಟೇರ್, ಡೆಡಿರೊ ಟಾಂಪೇನ್ ಹಾಗೂ ಇನ್ನಿತರ ಅಮೆರಿಕನ್ ಮತ್ತು ಫ್ರೆಂಚ್ ಕ್ರಾಂತಿಗಳ ಬೌದ್ಧಿಕ

(13ನೇ ಪುಟಕ್ಕೆ)

ಬುದ್ಧನೋ? ಮಾರ್ಕ್ಸನೋ?

ಏಪ್ರಿಲ್ 14 ರಂದು ರಾಷ್ಟ್ರದಾದ್ಯಂತ ಡಾ|| ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಜನ್ಮದಿನವನ್ನು ಆಚರಿಸಲಾಯಿತು. ದಲಿತ ಮತ್ತು ಶೋಷಿತ ಸಮುದಾಯಕ್ಕೆ ಅಂಬೇಡ್ಕರ್‌ರವರ ಬದುಕು, ಬರಹ ಮತ್ತು ಚಿಂತನೆಗಳು ಸ್ಫೂರ್ತಿದಾಯಕ.

ಒಂದು ಕಡೆ ಅವರನ್ನು ದೈವತ್ವಕ್ಕೇರಿಸಿ ಆರಾಧಿಸಿ ಅವರ ಚಿಂತನೆಗಳಿಗೆ ಗೆದ್ದಲು ಹಿಡಿಸುವ ಅಪಾಯವಿದ್ದರೆ ಇನ್ನೊಂದು ಕಡೆ ಅವರ ಜನ್ಮದಿನ ಆಚರಿಸುವ ಆಳುವ ವರ್ಗಗಳು ದಲಿತ ಸಮುದಾಯಕ್ಕೆ ಮಂಕುಬೂದಿ ಎರಚುವ ಹುನ್ನಾರವೂ ಇದೆ. ಈ ಎರಡರ ನಡುವೆ ನಿಂತ ಸ್ವಘೋಷಿತ ಕ್ರಾಂತಿಕಾರಿ ವೀರರು ಅಂಬೇಡ್ಕರ್‌ರ ತತ್ವಗಳನ್ನು ಸಾರಾಸಗಟು ಬೌದ್ಧ ಮತಕ್ಕೆ ಕಟ್ಟುಬಿದ್ದ, ಅಹಿಂಸಾಪರವಾದ, ಬೂರ್ಜ್ವಾ ಪ್ರಜಾಪ್ರಭುತ್ವವಾದಿ ಎಂದು ನಿರಾಕರಿಸುವ ಇನ್ನೊಂದು ಅಪಾಯವೂ ಇಲ್ಲದಿಲ್ಲ.

ಇದೆಲ್ಲದರ ನಡುವೆ ಅಂಬೇಡ್ಕರ್‌ರ ಆ ವಿಚಾರಗಳ ಅಸಲಿತನವನ್ನು ಪರಿಚಯಿಸಲು 'ರುಜುವಾತು' ದ್ವೈಮಾಸಿಕದಲ್ಲಿ ಪ್ರಕಟವಾಗಿದ್ದ ಅವರ ಅನುವಾದಿತ ಲೇಖನವನ್ನು ಕೊಡುತ್ತಿದ್ದೇವೆ. -ಸಂ.



ಮೂಲ ಮರಾಠಿ :
ಡಾ|| ಬಿ. ಆರ್. ಅಂಬೇಡ್ಕರ್
ಕನ್ನಡಕ್ಕೆ :
ಗೌರೀಶ ಕಾಯ್ಕಿಣಿ

ಕಾರ್ಲ್‌ಮಾರ್ಕ್ಸ್ ಮತ್ತು ಬುದ್ಧ! ಇವರಿಬ್ಬರಲ್ಲಿ ತುಲನೆ ಒಂದು ವಿನೋದವೆಂದು ಭಾವಿಸುವ ಶಕ್ಯತೆ ಇದೆ. ಮತ್ತು ಹಾಗೆ ಆದರೆ ಅದೇನು ಆಶ್ಚರ್ಯವಲ್ಲ. ಮಾರ್ಕ್ಸ್ ಮತ್ತು ಬುದ್ಧ ಇವರ ನಡುವೆ 2381 ವರ್ಷಗಳ ಅಂತರವಿದೆ. ಬುದ್ಧನ ಜನ್ಮ ಕ್ರಿ.ಪೂ. 563ರಲ್ಲಿ. ಮಾರ್ಕ್ಸನದು ಕಿ.ಶ. 1818ರಲ್ಲಿ. ಕಾರ್ಲನನ್ನು ಹೊಸ ಆರ್ಥಿಕ ತತ್ವ ಪ್ರಣಾಲಿಯ ಶಿಲ್ಪಿಯೆಂದು ಕರೆಯಲಾಗುತ್ತದೆ. ತಿರುಗಿ ಬುದ್ಧ ರಾಜ್ಯಶಾಸ್ತ್ರ, ಅರ್ಥಶಾಸ್ತ್ರಗಳ ಯಾವ ಸಂಬಂಧವೂ ಇಲ್ಲದ ಹೊಸ ಧರ್ಮದ ಸಂಸ್ಥಾಪಕನೆಂಬುದರಾಚೆಗೆ ಬೇರೇನೆಂದೂ ಭಾವಿಸಲಾಗುವುದಿಲ್ಲ. "ಬುದ್ಧನೋ ಕಾರ್ಲಮಾರ್ಕ್ಸನೋ?" ಈ ಶೀರ್ಷಿಕೆ ಅನ್ವರ್ಥಕವೆನಿಸುವುದಿಲ್ಲ. ಏಕೆಂದರೆ ಈ ಶೀರ್ಷಿಕೆಯೆಂದರೆ, ಯಾರ ನಡುವೆ ಸುದೀರ್ಘ ಕಾಲಾವಧಿಯ ಅಂತರವಿದೆಯೋ, ಯಾರು ತೀರ ವಿಭಿನ್ನ ಕ್ಷೇತ್ರಗಳನ್ನು ವ್ಯಾಪಿಸಿದರೋ ಅಂಥ ಎರಡು ವ್ಯಕ್ತಿಗಳ ನಡುವೆ ಸಾಮ್ಯ ಅಥವಾ ವಿರೋಧವನ್ನು ತೋರಿಸುತ್ತದೆ. ಮಾರ್ಕ್ಸವಾದಿಗಳು ಈ ಸಂಗತಿಯ ಕುಚೇಷ್ಟೆ ಮಾಡುವವರೇ. ಆದರೆ ಮಾರ್ಕ್ಸ್ ಮತ್ತು ಬುದ್ಧ ಇವರೀರ್ವರನ್ನು ಒಂದೇ ಪಾತಳಿಯವರೆಂದು ತೀರ್ಮಾನಿಸಿದ್ದಕ್ಕಾಗಿ ತಮ್ಮ ಅಸಮ್ಮತಿ-ಅಸಂತೋಷಗಳನ್ನು ತೋರಿಸಬಹುದು. ಬುದ್ಧ ಎಷ್ಟು ಪ್ರಾಚೀನ! ಮಾರ್ಕ್ಸ್ ಎಷ್ಟು ಅರ್ವಾಚೀನ! ಮಾರ್ಕ್ಸವಾದಿಗಳು ಅನ್ನಬಹುದು- ನಮ್ಮ ಗುರುವಿನೊಂದಿಗೆ ಹೋಲಿಸಿದರೆ ಬುದ್ಧ ತೀರ ಪ್ರಾಥಮಿಕ ಮಟ್ಟದವನೆನಿಸಬಹುದು. ಇಂಥ ಇಬ್ಬರು ವ್ಯಕ್ತಿಗಳ ತುಲನೆ ಯಾದರೂ ಹೇಗೆ ಆಗಬಲ್ಲದು? ಮಾರ್ಕ್ಸವಾದಿಗಳು ಬುದ್ಧನಿಂದ ಏನು ಕಲಿಯಬಲ್ಲರು?

ಆದರೂ ಇವರಿಬ್ಬರಲ್ಲಿ ತುಲನೆ ಆಕರ್ಷಕ ಮಾತ್ರವಲ್ಲ; ಉದ್ಬೋಧಕವೂ ಆಗಿದೆ. ಇಬ್ಬರ ತತ್ವಗಳನ್ನು ಆಕಲನ ಮಾಡುವುದರಿಂದ, ಇಬ್ಬರ ಧ್ಯೇಯ ಪೂರ್ತಿಯತ್ತ ಒಯ್ಯುವ ತತ್ವಗಳ ಮೆಚ್ಚಿಗೆ ಇರುವುದರಿಂದ ಈ ಇಬ್ಬರ ತುಲನೆ ಮಾಡುವುದು ನನಗೆ ಅಪರಿಹಾರ್ಯವೆನಿಸುತ್ತದೆ.

ಮಾರ್ಕ್ಸವಾದಿಗಳು ತಮ್ಮ ಭ್ರಮೆಗಳನ್ನು ಬದಿಗಿಟ್ಟು ಬುದ್ಧನ ತತ್ವಜ್ಞಾನದ ಅಭ್ಯಾಸ ಮಾಡಿದರೆ, ಆತನ ಧ್ಯೇಯದ ಆಕಲನೆ ಮಾಡಿಕೊಂಡರೆ ಅವರು ತಮ್ಮ ದೃಷ್ಟಿಕೋನವನ್ನು ಬದಲಿಸಬಹುದೆಂದು ನನಗೆ ಖಚಿತವಾಗಿಯೂ ಅನಿಸುತ್ತದೆ. ಆದರೆ ಬುದ್ಧನ ಅವಹೇಳನೆಯನ್ನೇ ಮಾಡಬೇಕೆಂದು ನಿಶ್ಚಯ ಮಾಡಿಕೊಂಡವರಿಂದ ಅವನ ಉಪಾಸನೆಯ ಅಪೇಕ್ಷೆ ಮಾಡುವುದೆಂದರೆ ತಿಳಿದೂ ತಿಳಿದೂ ಅಪೇಕ್ಷಾ ಭಂಗವನ್ನು ಮಾಡಿಕೊಂಡಂತೆ. ಆದರೂ ಇಷ್ಟೊಂದು ಹೇಳಬಹುದು. ಬುದ್ಧನ ಬೋಧನೆಯಿಂದ ಅವರಿಗೆ ಏನಾದರೂ ಕಲಿಯತಕ್ಕದ್ದಿದೆ- ಎಂಬುದನ್ನು ಅವರು ಖಚಿತವಾಗಿಯೂ ಮನಗಾಣಬಹುದು.

ಬುದ್ಧನ ಮಾರ್ಗ

ಸರ್ವ ಸಾಧಾರಣವಾಗಿ ಭಗವಾನ್ ಬುದ್ಧ ಮತ್ತು ಅಹಿಂಸೆಯ ತತ್ವ ಇವೆರಡನ್ನು ತಳಕು ಹಾಕಲಾಗುತ್ತದೆ. ಅವನ ಬೋಧನೆಯ ಸಾರ ಸರ್ವಸ್ವವೇ ಇದು- ಎಂದು ಕ್ವಚಿತ್ತಾಗಿ ಯಾವನೊಬ್ಬನೂ ತಿಳಿಯಬಹುದು. ಭಗವಾನ್ ಬುದ್ಧನು ಬೋಧಿಸಿದ್ದು ಬಹಳ ವ್ಯಾಪಕ; ಅಹಿಂಸೆಗೂ ಆಚೆಯದಾಗಿದೆ. ಆದ್ದರಿಂದ ಅವನ ತತ್ವಗಳನ್ನು ಸಂಗ್ರಹವಾಗಿ ನಮೂದಿಸುವುದು ಅಗತ್ಯ. 'ತ್ರಿಪಿಟಿಕ' ಗ್ರಂಥವನ್ನು ಓದಿದಾಗ ನನಗೆ ತಿಳಿದುಬಂದಂಥ ಅಂಶಗಳನ್ನು ಈ ಕೆಳಗೆ ಕ್ರಮವಾಗಿ ಸಾದರಪಡಿಸುತ್ತೇನೆ :—

1. ಧರ್ಮವು ಸ್ವತಂತ್ರ ಸಮಾಜ ರಚನೆಗಾಗಿ ಅವಶ್ಯವಿದೆ.

2. ಪ್ರತಿಯೊಂದು ಧರ್ಮ ಸರ್ವಾಂಗೀಣವಾಗಿಯೇ ಇರುತ್ತದೆಂದು ಅಲ್ಲ.

3. ಧರ್ಮವು ಬದುಕಿನ ವಿಷಯವಾಗಿಯೇ ಹೇಳಬೇಕು. ಈಶ್ವರ ಅಥವಾ ಸ್ವರ್ಗ ಅಥವಾ ಪೃಥ್ವಿ- ಇವುಗಳ ಬಗೆಗೆ 'ಠೋಕತಾಳೆ' ಸಾರಿದರೆ . ಕೆಲಸಕ್ಕೆ ಬಾರದು.

4. ಈಶ್ವರನನ್ನು ಧರ್ಮದ ಕೇಂದ್ರಬಿಂದುವಾಗಿ ಮಾಡುವುದು ತಪ್ಪು.

5. ಆತ್ಮದ ವಿಮೋಚನೆಗಾಗಿ ಧರ್ಮವನ್ನು ಕೇಂದ್ರಬಿಂದುವಾಗಿ ಮಾಡುವುದು ತಪ್ಪು.

6. ನಿಜವಾದ ಧರ್ಮ ಮನುಷ್ಯನ ಅಂತಃಕರಣದಲ್ಲಿ ಇರುತ್ತದೆ. ಶಾಸ್ತ್ರದಲ್ಲಿ ಇರುವುದಿಲ್ಲ.

7. ಮಾನವ ಮತ್ತು ನೀತಿ ಧರ್ಮದ ಆಧಾರಗಳು. ಇಲ್ಲದಿದ್ದರೆ ಆ ಧರ್ಮವು ಕ್ರೂರ ಭ್ರಾಮತಿ.

8. ನೀತಿಯು ಜೀವನದ ಆದರ್ಶವಾಗಿದ್ದ ಮಾತ್ರಕ್ಕೆ ಸಾಲದು. ಈಶ್ವರನು ಇಲ್ಲನೆಂದಾಗ ನೀತಿಯು ಜೀವನಕ್ಕೆ ನಿಯಾಮಕವಾಗಲಿಕ್ಕೇ ಬೇಕು.

9. ಧರ್ಮದ ಕಾರ್ಯವು ಜಗತ್ತಿನ ಪುನಃ ರಚನೆ ಮಾಡುವುದಾಗಿದೆ, ಹೊರತು ಅದರ ಆದಿ-ಅಂತಗಳ ಸ್ಪಷ್ಟೀಕರಣವನ್ನಲ್ಲ.

10. ಜಗತ್ತಿನಲ್ಲಿ ಅಸುಖ (ದುಃಖ)ವಿದ್ದರೆ ಅದು ಸ್ವಾರ್ಥದ ಸಂಘರ್ಷದಿಂದ ಮತ್ತು ಅದರಿಂದ ಮುಕ್ತವಾಗುವ ಮಾರ್ಗವು 'ಅಷ್ಟಾಂಗ ಮಾರ್ಗ'ದ ಅವಲಂಬನೆ.

ಅಸಹಾಯಕ ವಿಧವೆಯರ ಸಂಕಷ್ಟಗಳನ್ನು ಕಡಿಮೆ ಮಾಡಲು ಒಂದು ಪ್ರಯತ್ನ

ನಿರಾಶ್ರಿತ ವಿಧವೆಯರಿಗೆ ಮಾಸಾಶನ ಯೋಜನೆ

ದಿಕ್ಕಿಲ್ಲದ, ನನ್ನವರೆನ್ನಲು ಯಾರೂ ಇರದ ಅನಾಥ ವಿಧವೆಯರಿಗೆ ಒಂದು ಸಹಾಯ ಹಸ್ತ. ಈಗ ಅವರು ತಿಂಗಳಿಗೆ 50 ರೂ.ಗಳ ಮಾಸಾಶನ ಪಡೆಯಲು ಅರ್ಜಿ ಹಾಕಿಕೊಳ್ಳಬಹುದು.

—: ಅರ್ಹತೆಗಳು :—

18 ವರ್ಷಕ್ಕೆ ಮೇಲ್ಪಟ್ಟಿರಬೇಕು.

ಕರ್ನಾಟಕದಲ್ಲಿ 3 ವರ್ಷಕ್ಕಿಂತಲೂ ಹೆಚ್ಚು ಕಾಲದಿಂದ ವಾಸಮಾಡುತ್ತಿರಬೇಕು.

ವಾರ್ಷಿಕ ಆದಾಯ 1500 ರೂ.ಗಳಿಗೂ ಕಡಿಮೆ ಇರಬೇಕು.

ಅರ್ಜಿ ನಮೂನೆಗಳು ಹಾಗೂ ವಿವರಗಳು ಪಂಚಾಯಿತಿ, ತಾಲ್ಲೂಕು ಮುನಿಸಿಪಲ್ ಅಥವಾ ಕಾರ್ಪೊರೇಷನ್‌ನ ಕಛೇರಿಗಳಲ್ಲಿ ಲಭಿಸುತ್ತವೆ.

ಖಾಲೀ ಹಾಳೆಯಲ್ಲಿ ಬರೆದುಕೊಂಡ ಅರ್ಜಿಗಳನ್ನು ಸ್ವೀಕರಿಸಲಾಗುತ್ತದೆ.

ಅರ್ಜಿಗಳ ಜೊತೆ ಲಗತ್ತಿಸಬೇಕಾದ ಪ್ರಮಾಣಪತ್ರಗಳು :

ಜನನ ಮರಣಗಳ ರಿಜಿಸ್ಟ್ರಾರ್ ಅಥವಾ ಅವರಿಂದ ಅಧಿಕಾರ ಪಡೆದವರು ನೀಡುವ ವಿಧವಾ ಪ್ರಮಾಣಪತ್ರ.

ಹುಟ್ಟಿದ ದಿನಾಂಕದ ಬಗ್ಗೆ ಪ್ರಮಾಣಪತ್ರ ಅಥವಾ ಶಾಲಾ ಬಿಡುಗಡೆ ಪತ್ರ.

ಪಾಸ್‌ಪೋರ್ಟ್ ಅಳತೆಯ 3 ಭಾವಚಿತ್ರಗಳು.

ಈ ಮಾಸಾಶನದ ಅವಶ್ಯಕತೆಯಿರುವ ನಿರಾಶ್ರಿತ ವಿಧವೆಯರು ನಿಮಗೆ ತಿಳಿದಿದ್ದಲ್ಲಿ ಅವರಿಗೆ ಈ ಯೋಜನೆಯ ಬಗ್ಗೆ ತಿಳಿಸಿ. ಅವರು ಅರ್ಜಿ ಹಾಕಿಕೊಳ್ಳಲು ಸಹಾಯಮಾಡಿ.

ಅಸಹಾಯಕರಿಗೊಂದು ಸಹಾಯದ ಯೋಜನೆ

● ಕರ್ನಾಟಕ ವಾರ್ತೆ

11. ಖಾಸಗಿ ಒಡೆತನದ ಹಕ್ಕು ಒಂದು ವರ್ಗವನ್ನು ಸತ್ತಾಧಾರಿಯಾಗಿ ಮಾಡುತ್ತದೆ ಮತ್ತು ಇನ್ನೊಂದು ವರ್ಗವನ್ನು ದುಃಖಿಯಾಗಿ ಮಾಡುತ್ತದೆ.

12. ಈ ದುಃಖದ ಕಾರಣವನ್ನು ಹೋಗಲಾಡಿಸಿ, ಆ ದುಃಖವನ್ನು ದೂರ ಮಾಡುವುದು ಸಮಾಜದ ಹಿತಕ್ಕಾಗಿ ಅವಶ್ಯಕವಿದೆ.

13. ಮಾನವ ಜಾತಿಯೆಲ್ಲ ಸರಿಸಮಾನ.

14. ಮನುಷ್ಯನ ಪರೀಕ್ಷೆ ಅವನ ಕರ್ತೃತ್ವದ ಮೌಲ್ಯದಿಂದ ಆಗುತ್ತದೆ; ಹುಟ್ಟಿನಿಂದ ಅಲ್ಲ.

15. ಮಹತ್ವವಿರುವುದು ಉಚ್ಚ ಆದರ್ಶಗಳಿಗೆ, ಉಚ್ಚ ಜಾತಿಗಳಿಗೆ ಅಲ್ಲ.

6. ಸರ್ವರೊಂದಿಗೆ ಮೈತ್ರಿ ಅಥವಾ ಬಂಧು ಭಾವನೆಯನ್ನು ಎಂದೂ ಕಿತ್ತೊಗೆಯತಕ್ಕದ್ದಲ್ಲ. ನಿಮ್ಮ ಶತ್ರುಗಳಿಗೂ ನೀವು ಋಣಿಯಾಗಿರತಕ್ಕದ್ದು.

17. ಪ್ರತಿಯೊಬ್ಬನಿಗೂ ಜ್ಞಾನಪ್ರಾಪ್ತಿಯ ಅಧಿಕಾರವಿದೆ. ಬದುಕಲಿಕ್ಕೆ ಅನ್ನವು ಎಷ್ಟು ಅಗತ್ಯವೋ ಅಷ್ಟೇ ಜ್ಞಾನವೂ ಅವಶ್ಯ.

18. ಶೀಲವಿಲ್ಲದ ಜ್ಞಾನ ಗಂಡಾಂತರದ್ದು.

19. ತಪ್ಪದಿರುವುದು ಯಾವುದೂ ಇಲ್ಲ. ಸದಾ ಬಂಧನಕರವೆಂಬುದು ಯಾವುದೂ ಇಲ್ಲ. ಪ್ರತಿಯೊಂದು ಸಂಗತಿಯನ್ನು ಪರಿಶೀಲಿಸಲು, ಪರೀಕ್ಷಿಸಲು ಸಾಧ್ಯ.

20. ಸರ್ವ ಪ್ರಮಾಣವಾದದ್ದು ಯಾವುದೂ ಇಲ್ಲ.

21. ಪ್ರತಿಯೊಂದು ಸಂಗತಿಯೂ ಕಾರ್ಯವಾದಕ್ಕೆ ಹೊಂದಿಯೇ ಇರುತ್ತದೆ. (ಪ್ರತಿಯೊಂದು ಆಗುಹೋಗಿಗೆ ಕಾರಣವಿರುತ್ತದೆ.)

22. ಶಾಶ್ವತ ಅಥವಾ ಸನಾತನವೆಂಬುದು ಯಾವುದೂ ಇಲ್ಲ. ಪ್ರತಿಯೊಂದು ವಸ್ತುವೂ ಪರಿವರ್ತನಶೀಲವು. 'ಇರುವುದು' ಅಂದರೆ 'ಆಗುವುದು'.

23. ಯುದ್ಧವು ಅಯೋಗ್ಯವು ನಿಜ; ಆದರೆ ಅದು ಸತ್ಯಕ್ಕಾಗಿ ನ್ಯಾಯಕ್ಕಾಗಿ ಇದ್ದರೆ, ಅದು ಯೋಗ್ಯವೆ.

24. ಗೆದ್ದವನಿಗೆ ಸೋತವನ ಕುರಿತು ಕರ್ತವ್ಯಗಳಿರುತ್ತವೆ.

ಬುದ್ಧನ ಮಾರ್ಗ ಸಾರಾಂಶ ರೂಪದಲ್ಲಿ ಇಂತಿದೆ. ಎಷ್ಟು ಪುರಾತನ! ಆದರೂ ಅದೆಷ್ಟು ನವನವೋನ್ಮೇಷ ಶಾಲಿ! ಮತ್ತು ಎಷ್ಟು ಸರ್ವವ್ಯಾಪಿ!

ಮಾರ್ಕ್ಸನ ಮೂಲ ಮಾರ್ಗ

ಈಗ ಕಾರ್ಲಮಾರ್ಕ್ಸ ಪ್ರತಿಪಾದಿಸಿದ ಮೂಲದ ಮಾರ್ಗದತ್ತ ಹೊರಳೋಣ. ಕಾರ್ಲಮಾರ್ಕ್ಸ ಆಧುನಿಕ ಸಮಾಜವಾದದ ಅಥವಾ ಸಾಮ್ಯವಾದದ ಜನಕನೆಂಬುದಕ್ಕೆ ಸಂದೇಹವಿಲ್ಲ. ಆದರೆ ಕೇವಲ ಸಮಾಜವಾದದ ತತ್ವ ಪ್ರಣಾಲಿಯನ್ನು ಪ್ರತಿಪಾದಿಸುವುದಷ್ಟೇ ಆತನ ಕಾರ್ಯವಾಗಿದ್ದಿಲ್ಲ. ಅದನ್ನು ಅವನಿಗೂ ಮುಂಚೆ ಬಹಳ ಜನ ಮಾಡಿದ್ದರು. ಮಾರ್ಕ್ಸನಿಗೆ ಸಿದ್ಧಮಾಡಿ ಕಾಣಿಸುವುದಿತ್ತೇನೆಂದರೆ ತನ್ನ ಸಮಾಜವಾದ ಶಾಸ್ತ್ರೀಯ (Scientific Socialism) ವಾಗಿದೆ. ಅವನ ಜಗಳ ಬಂಡವಾಳದಾರರ ವಿರುದ್ಧ ಎಷ್ಟಿತ್ತೋ ಅಷ್ಟೇ ಕನಸುಳ್ಳ ಸಮಾಜವಾದಿಗಳ (Utopian Socialists) ವಿರುದ್ಧವೂ ಇತ್ತು. ಅವನಿಗೆ ಇಬ್ಬರ ಬಗೆಗೂ ತಿರಸ್ಕಾರವಿತ್ತು. ಮಾರ್ಕ್ಸ ತನ್ನ ಸಮಾಜವಾದದ ಶಾಸ್ತ್ರಶುದ್ಧತೆಯ ಬಗೆಗೆ ಹೆಚ್ಚಿನ ಪ್ರಾಶಸ್ತ್ಯ ನೀಡುತ್ತಾನೆ. ಈ ಅಂಶವನ್ನು



ಕಾರ್ಲ್‌ಮಾರ್ಕ್ಸ್ ಆಧುನಿಕ ಸಮಾಜವಾದದ ಅಥವಾ ಸಾಮ್ಯವಾದದ ಜನಕನೆಂಬುದಕ್ಕೆ ಸಂದೇಹವಿಲ್ಲ. ಆದರೆ ಕೇವಲ ಸಮಾಜವಾದದ ತತ್ವ ಪ್ರಣಾಳಿಕೆಯನ್ನು ಪ್ರತಿಪಾದಿಸುವುದಷ್ಟೇ ಆತನ ಕಾರ್ಯವಾಗಿದ್ದಿಲ್ಲ.

ನೆನಪಿನಲ್ಲಿಡಬೇಕಾದದ್ದು. ಅವನ ಸಮಾಜವಾದ ಶಾಸ್ತ್ರ ಶುದ್ಧವಿದೆ. ಸ್ವಪ್ನಮಯವಲ್ಲ. ಇದನ್ನು ಹೇಳುವ ಆದ್ಯಹೇತುವು ಮಾರ್ಕ್ಸನ ಎಲ್ಲ ತತ್ವ ಪ್ರಣಾಲಿಯ ಪ್ರತಿಪಾದನೆಯಲ್ಲಿಯೂ ಇದೆ

ಕಾರ್ಲಮಾರ್ಕ್ಸ ಶಾಸ್ತ್ರಶುದ್ಧತೆಯನ್ನು ಅರ್ಥೈಸುವುದು ಹೀಗೆ-ಅವನ ಸಮಾಜವಾದ ನಿಃಸಂಶಯವಾಗಿ ಒದಗಿಬರತಕ್ಕದ್ದೆ. ಅದು ಅಪರಿಹಾರ್ಯ. ಸಮಾಜವು ಆ ಹಾದಿಯಲ್ಲಿ ಹೆಜ್ಜೆ ಹಾಕುತ್ತಿದೆ ಮತ್ತು ಅದನ್ನು ಯಾರೂ ತಡೆಗಟ್ಟಲಾರರು. ಇದನ್ನು ಸಿದ್ಧಮಾಡಲಿಕ್ಕೆ ಮಾರ್ಕ್ಸನು ಎಲ್ಲಾ ಖಟಾಟೋಪ ಮಾಡಿದನು.

ಮಾರ್ಕ್ಸನ ಹೇಳಿಕೆ ಈ ಕೆಳಗಿನ ಪ್ರಸ್ತಾಪಗಳ ಮೇಲೆ ನೆಲೆಗೊಂಡಿದೆ. ಅದು ಹೀಗೆ:–

1. ತತ್ವಜ್ಞಾನ ಜಗತ್ತಿನ ಪುನಃ ರಚನೆಯನ್ನು ಮಾಡಬೇಕು. ಅದರ ಉಗಮ ಸ್ಪಷ್ಟೀಕರಣಗೊಳಿಸಬೇಕೆಂಬುದು ಮಾತ್ರವಲ್ಲ.

2. ಇತಿಹಾಸವನ್ನು ನಿರ್ಮಿಸುವ ಶಕ್ತಿ ಮುಖ್ಯವಾಗಿ ಆರ್ಥಿಕವಿರುತ್ತದೆ.

3. ಸಮಾಜವು ಎರಡು ವರ್ಗಗಳಲ್ಲಿ ವಿಭಕ್ತ ಮಾಲಕ ಮತ್ತು ಕೆಲಸಗಾರ (ಶ್ರಮಜೀವಿ).

4. ಕೆಲಸಗಾರರ ಪರಿಶ್ರಮದಿಂದ ಉಂಟಾದ ಹೆಚ್ಚಿನ ಉತ್ಪಾದನೆಯಲ್ಲಿ ಸಂಚು-ವಂಚನೆ ನಡೆಯಿಸಿ ಮಾಲಕ ವರ್ಗ ಕೆಲಸಗಾರರ ಶೋಷಣೆ ಮಾಡುತ್ತದೆ.

5. ಈ ಶೋಷಣೆಗೆ ಉತ್ಪಾದನೆಯ ಸಾಧನಗಳ ರಾಷ್ಟ್ರೀಕರಣದಿಂದ ಹಿಡಿತಹಾಕಬಹುದು. ಅಂದರೆ ಖಾಸಗಿ ಒಡೆತನ ನಷ್ಟವಾಗಬಹುದು.

6. ಈ ಶೋಷಣೆಯಿಂದ ಕೆಲಸಗಾರ ವರ್ಗದ ಬಡತನ ಒಂದೇ ಸಮನೆ ಬೆಳೆಯುತ್ತಾ ಹೋಗುತ್ತದೆ.

7. ಈ ಬೆಳೆಯುವ ಬಡತನವು ಅವರಲ್ಲಿ ಬಂಡಾಯ ಪ್ರವೃತ್ತಿಯನ್ನು ಹುಟ್ಟಿಸುತ್ತದೆ. ಅದರ ರೂಪಾಂತರ ವರ್ಗಕಲಹದಲ್ಲಿ ಆಗುತ್ತದೆ.

8. ಮಾಲಿಕರಿಗಿಂತ ಕೆಲಸಗಾರರ ಸಂಖ್ಯೆ ಹೆಚ್ಚು ಆದ್ದರಿಂದ ಅವರು ರಾಷ್ಟ್ರವನ್ನು (ರಾಜ್ಯ ಸತ್ತೆಯನ್ನು) ವಶಪಡಿಸಿಕೊಳ್ಳುವುದು ಖಚಿತ ಮತ್ತು ಅವರು ತಮ್ಮ ಸತ್ತೆ ತಾವೇ ಸ್ಥಾಪಿಸುವರು. ಇದನ್ನೆ ಕಾರ್ಲಮಾರ್ಕ್ಸ 'ಕೆಲಸಗಾರರ ಸರ್ವಾಧಿಕಾರ' (Dictatorship of the proletariate) ಅನ್ನುತ್ತಾನೆ. (ಪ್ರೊಲಿಟರೇಟ್ ಅಂದರೆ ಕೆಲಸಗಾರರೆಂದು ಅರ್ಥವಲ್ಲ. Prodis ಎಂಬ ಲ್ಯಾಟಿನ್ ಮೂಲದ ಅರ್ಥ ಸಂತತಿ, ಅಂದಾಗ proletariate ಜನಸಾಮಾನ್ಯರು, ಬಹುಜನ ಸಮುದಾಯ. ಅತಿ ನಿಕೃಷ್ಟ ವರ್ಗಗಳು-ಅನುವಾದಕ.)

9. ಈ ಸಂಗತಿಗಳು ಅನಿವಾರ್ಯ ಆದ್ದರಿಂದ ಸಮಾಜವಾದವು ನಿಃಸಂಶಯವಾಗಿಯೂ ಬರುವುದು.

ನನಗೆ ಅನಿಸುತ್ತದೆ. ನಾನು ನಮೂದಿಸುವ ಈ ಮೇಲಿನ ಪ್ರಸ್ತಾಪಗಳು ಅಸಂದಿಗ್ಧ ಹಾಗೂ ಮಾರ್ಕ್ಸವಾದೀ ಸಮಾಜವಾದದ ಮೂಲ ಅಧಿಷ್ಠಾನವಾಗಿದೆ.

ಮಾರ್ಕ್ಸವಾದದ ಶೇಷವೇನು ಉಳಿಯಿತು?

ಬುದ್ಧ ಮತ್ತು ಮಾರ್ಕ್ಸರ ತತ್ವಪ್ರಣಾಲಿಗಳ ತುಲನೆ ಮಾಡುವುದಕ್ಕೆ ಮುಂಚೆ ಮಾರ್ಕ್ಸವಾದದ ಮೂಲಭೂತ ಅಂಗಗಳಲ್ಲಿ ಶೇಷವೇನು ಉಳಿದಿದೆ ಎಂಬುದನ್ನು ನೋಡುವುದು ಅಗತ್ಯವಿದೆ. ಇತಿಹಾಸವು ಅವುಗಳಲ್ಲಿ ಎಷ್ಟೊಂದು ಹುಸಿಯೆಂದು ಸಿದ್ಧಮಾಡಿತು? ಮತ್ತು ಅವರ ವಿರೋಧಿಗಳು ಎಷ್ಟೊಂದು ನಾಶ ಮಾಡಿದರು? ಸಾಮಾನ್ಯವಾಗಿ 19ನೆಯ ಶತಮಾನದ ಮಧ್ಯಕ್ಕೆ ಇದನ್ನು ಪ್ರತಿಪಾದಿಸಿದ ಕಾಲದಿಂದ ಈ ಕುರಿತು ಟೀಕೆ ಆಗುತ್ತಲೇ ಇದೆ. ಈ ಟೀಕೆಗಳಿಂದ, ಮಾರ್ಕ್ಸ ನಿಲ್ಲಿಸಿದ ತತ್ವ ಪ್ರಣಾಲಿಯ ಗೋಪುರದ ಚೆಕ್ಕೆ ಚೂರುಗಳಾಗಿವೆ. ಸಮಾಜವಾದದ ಅಸಂದಿಗ್ಧ ಆಗಮನವಾಗುವುದೆಂಬ ಮಾರ್ಕ್ಸನ ಸಿದ್ಧಾಂತವು ಈಗ ಪೂರ್ತಿ ಹುಸಿಯಾಗಿದೆ. ಕೆಲಸಗಾರ ವರ್ಗದ ಸರ್ವಾಧಿಕಾರ ಮೊದಲಿಗೆ 1917ರಲ್ಲಿ ಒಂದು ದೇಶದಲ್ಲಿ ಸ್ಥಾಪಿಸಲಾಯಿತು. ಆದರೆ Das Capital ಈ ಸಮಾಜವಾದದ ಪ್ರಮಾಣ ಗ್ರಂಥದ ಪ್ರಕಾಶನದ ನಂತರ ಸುಮಾರು 70ವರ್ಷಗಳ ಮೇಲೆ ಹೀಗೆ ಸಾಮ್ಯವಾದ (Communism) ರಶಿಯಾದಲ್ಲಿ ಬಂದರೂ (ಇದು ಕೆಲಸಗಾರರ ಸರ್ವಾಧಿಕಾರಕ್ಕೆ ಇನ್ನೊಂದು ಹೆಸರು) ಅದು ಮಾನವೀ ಪ್ರಯತ್ನಗಳಿಗೆ ಹೊರತಾಗಿ ಅಸಂದಿಗ್ಧವಾಗಿ ಒದಗಿಬರುವದೆಂಬಂತೆ ಬರಲಿಲ್ಲ. ಸಾಮ್ಯವಾದವು ರಶಿಯಾದಲ್ಲಿ ಬರುವ ಮುಂಚೆ ಅಲ್ಲಿ ಕ್ರಾಂತಿಯುದ್ಧ ನಡೆಯ ಬೇಕಾಯಿತು. ಬಹಳ ಜನಹಿಂಸೆ ಆಯಿತು. ಪ್ರಾಣಹಾನಿ ಆಯಿತು. ನೆತ್ತರು ಹರಿಯಿತು. ಇನ್ನುಳಿದ ಜಗತ್ತು ಇನ್ನೂ ಸಾಮ್ಯವಾದೀ ಸರ್ವಾಧಿಕಾರದ ದಾರಿ ಕಾಯುತ್ತಲೇ ಇದೆ! ಸಮಾಜವಾದ ಅಸಂದಿಗ್ಧವಾಗಿ ಬರತಕ್ಕದ್ದೆ-ಮಾರ್ಕ್ಸವಾದಿ ಪ್ರಸ್ತಾಪಗಳು ಹುಸಿಯಾಗುವುದರೊಂದಿಗೆ ಮೇಲೆ ಹೇಳಿದ ಅದರ ಬಹಳಷ್ಟು ತತ್ವಗಳು ತರ್ಕ (Logic) ದಿಂದ ಹಾಗೂ ಅನುಭವದಿಂದ ಈಗ ನಾಮಶೇಷವಾಗಿ ಬಿಟ್ಟಿವೆ.

ಇತಿಹಾಸದ ಆರ್ಥಿಕ ಸ್ಪಷ್ಟೀಕರಣ (Economic Interpretation of History) ಇದೇ ಇತಿಹಾಸದ ಮೀಮಾಂಸೆಯೆಂಬ ಪ್ರಸ್ತಾಪ ವನ್ನು ಯಾರೂ ಲೆಕ್ಕಿಸುವುದಿಲ್ಲ. ಸಾಮಾನ್ಯ ಜನತೆ ದಿನೇ ದಿನೇ ಇನ್ನೂ ಬಡವಾಗುತ್ತ ನಡೆದಿದೆ ಎಂಬ ಸಿದ್ಧಾಂತವನ್ನೋ ಪ್ರಸ್ತಾಪವನ್ನೋ ಯಾರೂ ಮನ್ನಿಸುವುದಿಲ್ಲ. ಇದೇ ಗತಿ ಮಾರ್ಕ್ಸನ ಇತರ ಸಿದ್ಧಾಂತ ಗಳದು.

ಇನ್ನು ಶೇಷ ಉಳಿಯುವವು ಕೇವಲ 5 ಸಿದ್ಧಾಂತ ಗಳು. ಅವು ಚಿಕ್ಕವು, ಆದರೆ ಮಹತ್ವದವು. ನನ್ನ ಮತದಂತೆ ಅವು ಈ ಕೆಳಗಿನ 4 ಪ್ರಸ್ತಾಪಗಳಲ್ಲಿ ಸಮಾವೇಶಗೊಳ್ಳುತ್ತವೆ.

1. ತತ್ವಜ್ಞಾನದ ಕಾರ್ಯ ಜಗತ್ತಿನ ಪುನಾರಚನೆ ಮಾಡುವುದು ಹೊರತು ಜಗತ್ತಿನ ಆದಿ ಅಂತಗಳ ಸ್ಪಷ್ಟೀಕರಣದಲ್ಲಿಯೇ ಕಾಲಕಳೆಯುವುದಲ್ಲ.

2. ವರ್ಗವರ್ಗಗಳ ಹಿತ ಸಂಬಂಧಗಳಲ್ಲಿ ಸಂಘರ್ಷ ವಿರುತ್ತದೆ.

3. ಖಾಸಗೀ ಮಾಲಿಕತ್ವದ ಹಕ್ಕಿನಿಂದ ಒಂದು ವರ್ಗ ಸತ್ತಾಧೀಶವಾಗುತ್ತದೆ ಮತ್ತು ಇನ್ನೊಂದರ ಶೋಷಣೆಯಾಗಿ ಅದು ದುಃಖಿಯಾಗುತ್ತದೆ.

4. ಖಾಸಗಿ ಒಡೆತನವನ್ನು ನಷ್ಟಮಾಡಿ ದುಃಖದ ನಿರೋಧ ಮಾಡುವುದು ಸಮಾಜಕಲ್ಯಾಣದ ದೃಷ್ಟಿ ಯಿಂದ ಅಗತ್ಯವಾಗಿದೆ.

ಸಾಧ್ಯ

ಮಾರ್ಕ್ಸವಾದದ ಈ ಶೇಷ ಸಿದ್ಧಾಂತಗಳನ್ನು ಎತ್ತಿಕೊಂಡು ಈಗ ಬುದ್ಧ ಮತ್ತು ಕಾರ್ಲಮಾರ್ಕ್ಸ ಇವರ ತುಲನೆ ಮಾಡಬಹುದು.

ಪ್ರಥಮಸಿದ್ಧಾಂತದ ವಿಷಯಕ್ಕೆ ಬುದ್ಧ ಮತ್ತು ಮಾರ್ಕ್ಸ ಇವರಲ್ಲಿ ಹತ್ತಿರದ ಹೊಂದಾಣಿಕೆ ಇದೆ. ಇದು ಬುದ್ಧ ಮತ್ತು ಬ್ರಾಹ್ಮಣ ಪೊತ್ಥಪದರ ನಡುವಿನ ಸಂಭಾಷಣೆಯಿಂದ ಗೊತ್ತಾಗುತ್ತದೆ. ಎರಡನೆಯ ಸಿದ್ಧಾಂತದ ಕುರಿತು ಬುದ್ಧ ಮತ್ತು ದೊರೆ ಪಸೇನದೀ (ಕೋಸಲದೇಶದ ದೊರೆ) ಇವರ ಸಂಭಾಷಣೆ ಸಾಕ್ಷಿ ನೀಡುತ್ತದೆ. (ಡಾ. ಅಂಬೇಡಕರರು ಈ ಸಂಭಾಷಣೆಗಳನ್ನು ಉದಾಹರಿಸಿದ್ದಾರೆ. ಅವನ್ನು ಇಲ್ಲಿ ಕೈಬಿಡಲಾಗಿದೆ–ಅನುವಾದಕ). ಮೊದಲನೆಯ ಸಂಭಾಷಣೆಯಿಂದ ಬುದ್ಧ ಜಗತ್ತಿನ ಆದ್ಯಂತಗಳ ಬಗೆಗೆ ಅಂತಿಮ ತತ್ವಮಂಥನ ಮಾಡಲು ಬಯಸುವುದಿಲ್ಲವೆಂದು ತಿಳಿಯುತ್ತದೆ. 'ಧಮ್ಮ'ಕ್ಕೆ ಸದಾಚಾರಕ್ಕೆ ಈ ತತ್ವಜ್ಞಾನದ ಯಾವ ಸಂಬಂಧವೂ ಇಲ್ಲವೆಂದು ಅವನ ಅಭಿಪ್ರಾಯ. ಸಮಾಜದಲ್ಲಿಯ ವಿವಿಧ ವರ್ಗಗಳ ನಡುವಿನ ಅಂತಃಕಲಹವನ್ನು ಬುದ್ಧ ಅರಿತಿದ್ದಾನೆ ಎಂಬುದು ಎರಡನೆಯ ಸಂಭಾಷಣೆಯಿಂದ ಗೊತ್ತಾಗುತ್ತದೆ. ಈ ವರ್ಗ ಕಲಹದ ಬಗೆಗೆ ಬುದ್ಧನ ದೃಷ್ಟಿಕೋನವೇನೆಂದು ಹೇಳುವುದಾದರೆ ಆತನ "ಅಷ್ಟಾಂಗ ಮಾರ್ಗ"ವು. ವರ್ಗ ಕಲಹವು ದುಃಖದ ಕಾರಣ ವೆಂದು ಒಪ್ಪುತ್ತದೆ. ಬುದ್ಧನ ಭಾಷೆ ಮಾರ್ಕ್ಸನಿಂದ ಬೇರೆ. ಆದರೆ ಅರ್ಥ ಒಂದೇ. ದುಃಖದ ಬದಲು ಶೋಷಣೆ (exploitation) ಶಬ್ದ ಪ್ರಯೋಗಿಸಿದರೆ ಬುದ್ಧ ಮಾರ್ಕ್ಸನಿಂದ ಬೇರೆಯೆಂದು ಅನಿಸುವುದಿಲ್ಲ.

ಖಾಸಗೀ ಆಸ್ತಿ-ಸೊತ್ತಿನ ಕುರಿತು ಬುದ್ಧ-ಆನಂದರ ನಡುವಿನ ಸಂಭಾಷಣೆ ಉದ್ಬೋಧಕವಿದೆ. ಬುದ್ಧನು,



ಮೋಹ ಲೋಭಗಳೇ ಖಾಸಗೀ ಒಡೆತನದ ಕಾರಣ ಮತ್ತು ಪರಿಣಾಮಗಳೆಂದು ಸ್ಪಷ್ಟಪಡಿಸುತ್ತಾನೆ.

ಇನ್ನು 4ನೆಯ ಸಿದ್ಧಾಂತಕ್ಕೆ ಬೇರೆ ಪುರಾವೆ ಬೇಡ. ಭಿಖ್ಖುಸಂಘದ ನಿಯಮವೇ ಅದಕ್ಕೆ ತಕ್ಕ ಸಾಕ್ಷಿ. ವಿನಯ ನಿಯಮದಂತೆ ಭಿಖ್ಖುವು ಕೇವಲ 8 ವಸ್ತುಗಳನ್ನು ಖಾಸಗೀ ಸೊತ್ತಾಗಿ ಇಟ್ಟುಕೊಳ್ಳಬಹುದು. ಅದಕ್ಕೂ ಹೆಚ್ಚಿಲ್ಲ. ಬಟ್ಟೆಗಳು (ಚಾದರ), ಸೊಂಟದ ಪಟ್ಟಿ, ಭಿಕ್ಷಾಪಾತ್ರೆ, ಕೂಪು, ಸೂಜಿ-ದಾರ ಮತ್ತು ನೀರಿಗಾಗಿ ಮಡಕೆ. ಚಿನ್ನ ಬೆಳ್ಳಿ ಏನೇನೂ ಭಿಖ್ಖು ಸ್ವೀಕರಿಸಬಾರದು. ಅವುಗಳಿಂದ ಆತ ಬೇರೆ ವಸ್ತು ಕೊಳ್ಳಬಹುದೆಂಬ ಭೀತಿ.

ಸಾಧನ

ಬುದ್ಧನು ಪ್ರತಿಪಾದಿಸಿದ ಸಾಮ್ಯವಾದವನ್ನು ತರಲು ಸಾಧನಗಳು ನಿಶ್ಚಿತ. ಅವು ಮೂರು ವಿಭಾಗ. 1. ಪಂಚಶೀಲ 2. ಅಷ್ಟಾಂಗ ಮಾರ್ಗ ಮತ್ತು 3. ನಿರ್ವಾಣ ತತ್ವ.

ಸಂಬೋಧಿಯು (ಬುದ್ಧನು) ಹೊಸ ವಿಚಾರ ಧಾರೆಗೆ ಜನ್ಮವಿತ್ತನು. ಆ ವಿಚಾರಧಾರೆಯಲ್ಲಿಯೇ ಆತನಿಗೆ ಕಾಡುತ್ತಿದ್ದ ಸಮಸ್ಯೆಗಳನ್ನು ಬಗೆಹರಿಸುವ ಗುರುಕೀಲಿಯೂ ಇತ್ತು.

ಜಗತ್ತು ದುಃಖದಿಂದ ತುಂಬಿದೆ. ಈ ವಸ್ತುಸ್ಥಿತಿ ಹೊಸ ವಿಚಾರಧಾರೆಗೆ ಅಧಿಷ್ಠಾನವಾಗುತ್ತದೆ. ಈ ವಸ್ತುಸ್ಥಿತಿಯನ್ನು ಬರೆ ಒಪ್ಪಿಕೊಳ್ಳುವುದಲ್ಲ. ಅದರಿಂದ ಬಿಡುಗಡೆಯಾಗಲು ಯಾವುದೊಂದು ಯೋಚನೆಯನ್ನು ಮುಖ್ಯವಾಗಿ ಪ್ರಥಮವಾಗಿ ಅರಿತುಕೊಳ್ಳಬೇಕಾಗಿದೆ. ಈ ವಸ್ತುಸ್ಥಿತಿಯ ಅರಿವೆ ಬುದ್ಧನು ತನ್ನ ಧರ್ಮದ ಆರಂಭವೆಂದು ಪ್ರತಿಪಾದಿಸಿದ್ದಾನೆ.

ಬುದ್ಧನು ದುಃಖಕ್ಕೆ ಕಾರಣಗಳನ್ನು ಗುರುತಿಸುತ್ತಾನೆ. ಮಾನವನ ಬಹಳಷ್ಟು ದುಃಖ ಅವನ ದುರಾಚರಣೆಯಿಂದ ಉಂಟಾಗುತ್ತದೆ. ಅವನ್ನು ಹೋಗಲಾಡಿಸಲಿಕ್ಕೆ ಆತನು "ಪಂಚಶೀಲ"ದ ಅವಲಂಬನೆಯನ್ನು ಹೇಳುತ್ತಾನೆ. "ಪಂಚಶೀಲ"ದಲ್ಲಿ ಈ ಕೆಳಗಿನ ಸಂಗತಿಗಳು ಸೇರಿವೆ.

1. (1) "ಪ್ರಾಣಾತಿಪಾತ" ಮಾಡದಿರುವುದು. ಅಂದರೆ, ಪ್ರಾಣಿಹಿಂಸೆ ಮಾಡದಿರುವುದು.

(2) "ಅದಿನ್ನದಾನ" ಅಂದರೆ ಕಳವು ಮಾಡದಿರುವುದು.

(3) ವ್ಯಭಿಚಾರ ಮಾಡದಿರುವುದು.

(4) "ಮುಸಾವಾದ ಮಾಡದಿರುವುದು– ಅಂದರೆ ಸುಳ್ಳು ಹೇಳದಿರುವುದು

(5) ಮಾದಕ ವಸ್ತು ಸೇವನೆ ಮಾಡದಿರುವುದು.

2. ಜಗತ್ತಿನ ಬಹಳಷ್ಟು ದುಃಖಗಳು ಮನುಷ್ಯ-ಮನುಷ್ಯನ ನಡುವಿನ ವಿಷಮತೆಯಿಂದ ಉಂಟಾಗುತ್ತವೆ. ಆ ವಿಷಮತೆಯನ್ನು ಹೋಗಲಾಡಿಸಲಿಕ್ಕೆ ಬುದ್ಧನು 'ಅಷ್ಟಾಂಗ ಮಾರ್ಗ'ವನ್ನು ಪ್ರತಿಪಾದಿಸಿದ್ದಾನೆ. (ಸಮ್ಯಕ್-ದೃಷ್ಟಿ-ಸಂಕಲ್ಪ-ವಾಚ-ಕರ್ಮಾಂತ-ಆಜೀವ-ವ್ಯಾಯಾಮ–ಸ್ಮೃತಿ ಮತ್ತು ಸಮಾಧಿ) ಈ ಮಾರ್ಗದ ಹೇತು ಲೋಕದಲ್ಲಿ ನೀತಿಯ ಸತ್ತೆಯನ್ನು ಸ್ಥಾಪಿಸುವುದು.

3. ಧರ್ಮದ ಮೂರನೆಯ ವಿಭಾಗ ನಿರ್ವಾಣ ತತ್ವ. ಇದರಲ್ಲಿ ಅಷ್ಟಾಂಗ ಮಾರ್ಗದಲ್ಲಿಯ ಅಡ್ಡಿಗಳ ನಿವಾರಣೆ. ಅವು ಹತ್ತು-ಅಹಂತೆ, ಸಂದೇಹ–ಸಂಭ್ರಮ, ಕರ್ಮಕಾಂಡ, ಶಾರೀರಿಕ ಪ್ರವೃತ್ತಿ–ವಿಕಾರ, ಮತ್ಸರ, ಭೌತಿಕ ಭವಿಷ್ಯದ ಅಭಿಲಾಷೆ, ಸ್ವರ್ಗ, ವೃಥಾಭಿಮಾನ, ತನ್ನ ಸದ್ಗುಣಗಳ ಆಗ್ರಹ- ಈ ಅವಗುಣಗಳು ಉತ್ತಮ ಮನಸ್ಸುಗಳಿಗೆ ಬೇಗ ಅಂಟಿಕೊಳ್ಳುತ್ತವೆ. ಇನ್ನು ಹತ್ತನೆಯದು ಅಜ್ಞಾನ. ಅದನ್ನು ಗೆಲ್ಲುವುದು ಉಳಿದುಬಿಡುತ್ತದೆ.

ಧರ್ಮದ ನಾಲ್ಕನೆಯ ಭಾಗ "ಪಾರಮಿತಾ" ತತ್ವ. ಮನುಷ್ಯ ತನ್ನ ನಿತ್ಯ ಜೀವನದ ವ್ಯವಹಾರದಲ್ಲಿ ಅಂಗೀಕರಿಸಬೇಕಾದ ಹತ್ತು ಗುಣಗಳು ಇವು :

ಪ್ರಜ್ಞಾ, ಶೀಲ, ನೈಷ್ಕರ್ಮ್ಯ, ದಾನ, ವೀರ್ಯ (ಪ್ರಯತ್ನ), ಶಾಂತಿ, ಸತ್ಯ, ಅಧಿಷ್ಠಾನ (ಧ್ಯೇಯ ನಿಷ್ಠೆ), ಮೈತ್ರಿ, ಉಪೇಕ್ಷಾ (ವೈರಾಗ್ಯ)–ಈ ಸದ್ಗುಣ ಗಳಿಂದ "ಪಾರಮಿತಾ" ಅಂದರೆ ಪೂರ್ಣಾವಸ್ಥೆ. "ನಿರ್ವಾಣ"ವೆಂದರೆ ಮೇಲೆ ಹೇಳಿದ ಹತ್ತು ಅವಗುಣಗಳನ್ನು, ಅಡೆತಡೆಗಳನ್ನು ಪಾರುಮಾಡುವುದು.

ಇದರಿಂದ ಸ್ಪಷ್ಟವಾಗುವುದೇನೆಂದರೆ ಬುದ್ಧನು ಅಂಗೀಕರಿಸಿದ ಸಾಧನಗಳು ಮಾನವನ ನೈತಿಕ ಪ್ರವೃತ್ತಿಯನ್ನು ಬದಲಿಸುವ ಮತ್ತು ಅವನನ್ನು ಸ್ವಯಂ ಸ್ಫೂರ್ತಿಯಿಂದ ಆರ್ಯ ಮಾರ್ಗವನ್ನು ಅವಲಂಬಿಸಲು ಹಚ್ಚುವಂಥವುಗಳು.

ಇನ್ನು ಸಾಮ್ಯವಾದವು ಅಂಗೀಕರಿಸಿದ ಸಾಧನಗಳೂ ಇಷ್ಟೇ ಸ್ಪಷ್ಟ–ಸುಟಿ ಮತ್ತು ಶೀಘ್ರ ಅವು. ಅಂದರೆ, ಹಿಂಸೆ ಮತ್ತು ಕೆಲಸಗಾರ ವರ್ಗದ ಸರ್ವಾಧಿಕಾರ. ಸಾಮ್ಯವಾದಿಗಳ ಹೇಳಿಕೆ; ಇವೆರಡೇ ಮಾರ್ಗಗಳಿಂದ ಸಾಮ್ಯವಾದವು ಸ್ಥಾಪಿತವಾಗಲಿದೆ–ಒಂದು, ಹಿಂಸಾತ್ಮಕ ಚಳವಳಿ ; ಇದಕ್ಕಿಂತ ಬೇರೆ ಸುಲಭ ಹಾಗೂ ಸರಳವಾದ ಮಾರ್ಗವಿಲ್ಲ. ಇದರಿಂದ ಸದ್ಯದ ಸಮಾಜ ರಚನೆ ಮುರಿಯಲು ಸಾಧ್ಯ. ಎರಡು, ಕೆಲಸಗಾರ ವರ್ಗದ ಸರ್ವಾಧಿಕಾರ. ಇದರಿಂದ ಹೊಸ ವ್ಯವಸ್ಥೆ–ಸಂಘಟನೆ ಸುಸೂತ್ರವಾಗಿ ನಡೆಯಬಲ್ಲುದು. ಇದಕ್ಕೂ ಸರಳ ಸುಲಭ ಬೇರೆ ಮಾರ್ಗ ವಿಲ್ಲ.

ಬುದ್ಧ ಮತ್ತು ಕಾರ್ಲ್‌ಮಾರ್ಕ್ಸ ಇವರಲ್ಲಿ ಸಾಮ್ಯವೆಷ್ಟು, ವಿರೋಧವೆಷ್ಟು ಎಂಬುದು ಈಗ ಸ್ಫುಟವಾ

ಗುತ್ತದೆ. ಇವರಿಬ್ಬರ ಸಾಧ್ಯವು ಒಂದೆ. ವಿರೋಧ ವಿರುವುದು ಸಾಧನಗಳಲ್ಲಿ.

ಸಾಧನಗಳ ಮೂಲ್ಯ ಮಾಪನೆ:

ಇನ್ನು ನಾವು ಸಾಧನಗಳ ಮೂಲ್ಯ ಮಾಪನೆಯತ್ತ ಹೊರಳೋಣ. ನಾವು ಹೀಗೆ ಕೇಳೋಣ. ಯಾವ ಸಾಧನಗಳು ಉತ್ಕೃಷ್ಟ ಹಾಗೂ ಚಿರಕಾಲ ಉಳಿಯು ವಂಥವು. ಎರಡೂ ಕಡೆಗೆ ಕೆಲವು ತಪ್ಪು ತಿಳುವಳಿಕೆ ಗಳಿವೆ. ಅವನ್ನು ಮೊದಲು ವಿಷದಪಡಿಸೋಣ.

ಹಿಂಸೆ : ಹಿಂಸೆ ಎಂದೊಡನೆ ಕೆಲಜನರು ಅದರ ಮೂಲ್ಯ ಮಾಪನೆಗಿಂತ ಮೊದಲು ಅದರ ವಿಚಾರ ದಿಂದಲೇ ನಡುಗುತ್ತಾರೆ. ಇದು ಭಾವನಾ ಪ್ರಧಾನ ವೃತ್ತಿ. ಹಿಂಸೆಯನ್ನು ಬೇರುಗೂಡಿ ಕಿತ್ತುಹಾಕು ವುದು ಶಕ್ಯವಿಲ್ಲ. ಸಾಮ್ಯವಾದಿಯಲ್ಲದ ರಾಷ್ಟ್ರ ಗಳಲ್ಲಿಯೂ ಖೂನಿ ಮಾಡಿದವನಿಗೆ ಗಲ್ಲುಶಿಕ್ಷೆ ಆಗು ಆಗ ತ್ತದೆ. ಗಲ್ಲಿಗೇರಿಸುವುದು ಹಿಂಸೆ ಅನಿಸುವುದಿಲ್ಲ. ಸಾಮ್ಯವಾದಿ ಅಲ್ಲದ ರಾಷ್ಟ್ರ, ಸಾಮ್ಯವಾದಿ ಅಲ್ಲದ ರಾಷ್ಟ್ರದೊಂದಿಗೆ ಯುದ್ಧ ಮಾಡುತ್ತದೆ. ಲಕ್ಷಾಂತರ ಮಂದಿಯನ್ನು ಕೊಲ್ಲಲಾಗುತ್ತದೆ. ಇದು ಹಿಂಸೆ ಅಲ್ಲವೇ? ಕೊಲೆಗಡುಕ ಒಬ್ಬನು ನಾಗರೀಕನನ್ನು ಕೊಂದರೆ ಅವನನ್ನು ಕೊಲ್ಲುತ್ತಾರೆ. ವಿರೋಧಿರಾಷ್ಟ್ರ ದವನೆಂದು ಒಬ್ಬ ಸೈನಿಕನನ್ನು ಕೊಂದರೆ ಹೇಗೋ ಹಾಗೆಯೇ ಖಾಸಗಿ ಒಡೆತನ ಮಾನವ ಕೋಟಿಯನ್ನು ದುಃಖದಲ್ಲಿ ನೂಕುವುದೆಂದು ಒಬ್ಬ ಒಡೆಯನನ್ನು ಕೊಂದರೆ ಏನು ಕೆಟ್ಟದ್ದು? ಒಡೆಯರ ಬಗೆಗೆ ಅಪ ವಾದ ಕಲ್ಪಿಸುವುದಕ್ಕೆ ಏನು ಕಾರಣ? ಖಾಸಗೀ ಸ್ವತ್ತು ಪವಿತ್ರವೆಂದು ಮನ್ನಿಸುವುದೇಕೆ?

ಬುದ್ಧ ಹಿಂಸೆಯ ವಿರುದ್ಧನಿದ್ದ. ಆದರೆ ಆತ ನ್ಯಾಯಪ್ರಿಯನೂ ಆಗಿದ್ದ. ಎಲ್ಲಿ ನ್ಯಾಯಕ್ಕಾಗಿ ಅಗತ್ಯವೋ ಅಲ್ಲಿ ಪ್ರತೀಕಾರ ಶಕ್ತಿಗೆ ಆತ ಮಾನ್ಯತೆ ನೀಡಿದ್ದ. ಇದು ವೈಶಾಲಿಯ ಸಿಂಹ ಸೇನಾಪತಿ ಯೊಂದಿಗೆ ಆದ ಆತನ ಸಂಭಾಷಣೆಯಿಂದ ಚೆನ್ನಾಗಿ ಕಂಡುಬರುತ್ತದೆ. "ತಪ್ಪುಗಾರನಿಗೆ ಶಿಕ್ಷೆ ಆಗಲೇಬೇಕು. ನಿಷ್ಪಾಪ ಮನುಷ್ಯ ಮುಕ್ತನಾಗಲೇಬೇಕು. ನ್ಯಾಯಾ ಧೀಶ ಕಾಯಿದೆಗೆ ಅನುಸಾರವಾಗಿ ನಡೆಯು ತ್ತಾನೆ. ಅವನಿಗೆ ಹಿಂಸೆಯ ಕಲಂಕ ತಗಲುವುದಿಲ್ಲ. ನ್ಯಾಯಕ್ಕಾಗಿ, ಆತ್ಮರಕ್ಷಣೆಗಾಗಿ ಕಾದಾಡುವವನು ಅಹಿಂಸೆಯನ್ನು ಕಾಪಾಡಲಿಲ್ಲವೆಂದು ಅವನನ್ನು ಅಪರಾಧಿಯಾಗಿ ಎಣಿಸುವಂತಿಲ್ಲ. ಶಾಂತಿ ಸ್ಥಾಪನೆಯ ಎಲ್ಲ ದಾರಿಗಳೂ ನಿಷ್ಫಲವಾದಮೇಲೆ ಯುದ್ಧವನ್ನು ಆರಂಭಿಸುವವನ ಮೇಲೆ ಹಿಂಸೆಯ ಹೊಣೆಗಾರಿಕೆ ಬೀಳುತ್ತದೆ. ವಿನಾಶಕಾರಿ ಶಕ್ತಿಗಳಿಗೆ ಯಾರೂ ಶರಣು ಹೋಗತಕ್ಕದ್ದಲ್ಲ. ಯುದ್ಧವಿರಬೇಕು. ಆದರೆ ಅದು ಸ್ವಾರ್ಥದ ಉದ್ದೇಶಕ್ಕಾಗಿ ಅಲ್ಲ".

ಬುದ್ಧನ ಅಹಿಂಸೆ ಜೈನ ಧರ್ಮದ ಸಂಸ್ಥಾಪಕ ಮಹಾವೀರನದಂತೆ ಸರ್ವಸ್ವಿ (Absolute) ಯಾಗಿದ್ದಿಲ್ಲ. ಆತ ಶಕ್ತಿಯ ಉಪಯೋಗ ಸಾಮರ್ಥ್ಯ (Energy) ಎಂದು ಮಾಡಲು ಬಿಡುತ್ತಿದ್ದನು. ಸಾಮ್ಯವಾದಿಗಳು ಹಿಂಸೆಯನ್ನು ಏಕಮೇವತತ್ವ (Absolute Principle) ವಾಗಿ ಪ್ರತಿಪಾದಿ ಸುತ್ತಾರೆ. ಇದಕ್ಕೆ ಬುದ್ಧನ ಪ್ರಖರ ವಿರೋಧವಿತ್ತು.

ಬುದ್ಧನಿಗೆ ಸರ್ವಾಧಿಕಾರ ಎಂದಿಗೂ ಮಾನ್ಯವಿರ ಲಿಲ್ಲ. ಆತ ಪ್ರಜಾಸತ್ತಾವಾದೀ ನಾಗರಿಕನಾಗಿಯೇ ಹುಟ್ಟಿದ. ಪ್ರಜಾಸತ್ತಾವಾದೀ ನಾಗರಿಕನಾಗಿಯೇ ತೀರಿಕೊಂಡನು. ಅವನ ಕಾಲದಲ್ಲಿ 18 ರಾಜ ಸತ್ತೆಯ ರಾಜ್ಯಗಳಿದ್ದವು. ನಾಲ್ಕು ಪ್ರಜಾಸತ್ತೆಯ ರಾಜ್ಯಗಳಿ ದ್ದವು. ಆತ ಶಾಕ್ಯರವನಾಗಿದ್ದ. ಶಾಕ್ಯರದು ಪ್ರಜಾ ಸತ್ತೆಯ ರಾಜ್ಯ. ವೈಶಾಲಿಯ ಬಗೆಗೆ ಅವನಿಗೆ ಜೀವಾ ಳದ ಪ್ರೀತಿಯಿತ್ತು. ಅದು ಅವನಿಗೆ ಇನ್ನೊಂದು ಮನೆ ಆಗಿತ್ತು. ಮಹಾಪರಿ ನಿರ್ವಾಣಕ್ಕೆ ಮುಂಚೆ ಆತ ವರ್ಷಾವಾಸ (ಮಳೆಗಾಲದ ವಸತಿ) ಅಲ್ಲಿಯೇ ಕಳೆದನು. ಆ ಕಾಲ ಮುಗಿದು ವೈಶಾಲಿಯನ್ನು ಬಿಟ್ಟು ನಿಯಮದಂತೆ ಬೇರೆ ಕಡೆಗೆ ಹೊರಡಲು ನಿಶ್ಚಯಿಸಿ ದನು. ಕೆಲವು ಅಂತರ ನಡೆದು ಹೋದಮೇಲೆ ಆತ ವೈಶಾಲಿಯತ್ತ ನೋಡಿ ಆನಂದನಿಗೆ ಅಂದನು "ತಥಾ ಗತನದು ವೈಶಾಲಿಯ ಕಡೆಗೆ ಇದೇ ಕೊನೆಯ ನೋಟ!" ಬುದ್ಧ ನಿಜವಾದ ಸಮಾಜವಾದಿ ಆಗಿದ್ದ. ಮೊದಲು ಬುದ್ಧನೂ ಒಡಗೂಡಿ ಎಲ್ಲ ಭಿಖ್ಖುಗಳೂ ಚಿಂದಿಗಳ ಬಟ್ಟೆಗಳನ್ನೆ ತೊಡುತ್ತಿದ್ದರು. ಆ ನಿಯಮ ಮಾಡಿದ್ದು ಸಿರಿವಂತ ಸರದಾರ ವರ್ಗದವರು ಸಂಘ ವನ್ನು ಸೇರಬಾರದೆಂದು. ಅನಂತರ ವೈದ್ಯರಾಜ ಜೀವಕ ಬುದ್ಧನಿಗೆ ವಸ್ತ್ರಚಾದರ–ಇದು ಇಡಿಯ ಬಟ್ಟೆಯದು–ತೊಡಲು ಒತ್ತಾಯಿಸಿದನು. ಬುದ್ಧನು ಕೂಡಲೆ ನಿಯಮವನ್ನು ಬದಲಿಸಿ ಎಲ್ಲ ಭಿಖ್ಖು ಗಳಿಗೂ ಚಾದರಗಳನ್ನು ಜಾರಿ ಮಾಡಿದನು.

ಒಮ್ಮೆ ಬುದ್ಧನ ತಾಯಿ ಮಹಾ ಪ್ರಜಾಪತಿ- ಆಕೆಯೂ ಭಿಖ್ಖುಣೀ ಸಂಘಕ್ಕೆ ಸೇರಿದ್ದಳು–ಬುದ್ಧನಿಗೆ ನೆಗಡಿ ಆಗಿದೆಯೆಂದು ಕೇಳಿ ಅವನಿಗಾಗಿ ಉಣ್ಣೆಯ ರುಮಾಲು ಹೆಣೆದು ಒಯ್ದು ಅದನ್ನು ಸುತ್ತಿಕೊಳ್ಳಲು ಮಗನಿಗೆ ಹೇಳಿ ದಳು. ಆತ ಅದನ್ನು ಒಪ್ಪಲಿಲ್ಲ. "ಈ ವಸ್ತು ಕಾಣಿಕೆ ಆಗಿದ್ದರೆ ಇದು ಇಡಿಯ ಸಂಘಕ್ಕೆ ಸಲ್ಲಬೇಕು. ಅದ ರಲ್ಲಿಯ ಒಬ್ಬ ವ್ಯಕ್ತಿಗೆ ಅಲ್ಲ" ಎಂದು ಬುದ್ಧನು ನುಡಿ ದನು. ಆ ತಾಯಿ ಮತ್ತೆ ಮತ್ತೆ ಕೇಳಿಕೊಂಡಳು. ಆತ ಒಪ್ಪಲೇ ಇಲ್ಲ.

ಭಿಖ್ಖು ಸಂಘದ ಸಂವಿಧಾನ ಪೂರ್ತಿ ಪ್ರಜಾ ಸತ್ತಾತ್ಮಕವಾಗಿತ್ತು. ಬುದ್ಧ ಇತರ ಭಿಖ್ಖುಗಳಂತೆ; ಅವ ರಲ್ಲಿ ಒಬ್ಬ. ಹೆಚ್ಚೆಂದರೆ ಆತ್ಮ ಪ್ರಧಾನ ಮಂತ್ರಿಯಂತೆ. ಇತರ ಮಂತ್ರಿಗಳಲ್ಲಿ ಒಬ್ಬ. ಸರ್ವಾಧಿಕಾರಿ ಎಂದಿಗೂ ಆಗಿದ್ದಿಲ್ಲ. ಪರಿನಿರ್ವಾಣಕ್ಕೆ ಮುಂಚೆ ಎರಡು ಸಲ ಅವನಿಗೆ ಕೇಳಿಕೊಳ್ಳಲಾಯಿತು-ಸಂಘಟನೆಗೆ ಉತ್ತ ರಾಧಿಕಾರಿಯನ್ನು ನೇಮಿಸಲಿಕ್ಕೆ. ಆದರೆ ಪ್ರತಿ ಸಲವೂ ಆತ ಅದನ್ನು ತಳ್ಳಿ ಹಾಕಿದನು. ಆತನೆಂದ, "ಧಮ್ಮವೇ ಸಂಘಟಕ". ತಾನು ಸರ್ವಾಧಿಕಾರಿಯಾಗು ವುದನ್ನು ಹಾಗೆಯೇ ಇನ್ನೊಬ್ಬರನ್ನು ಸರ್ವಾಧಿಕಾರಿ ಯಾಗಿ ನೇಮಿಸುವುದನ್ನು ಆತ ನಿರಾಕರಿಸಿದನು.

ವಿಜೇತರು ಕೇವಲ ಜೀತರನ್ನೇ ನಿಶ್ಶಸ್ತ್ರ ಮಾಡದೆ ತಾವು ನಿಶ್ಶಸ್ತ್ರ ರಾದರೆ ಇಡೀ ಭೂಮಂಡಲದಲ್ಲಿ ಶಾಂತಿಯ ಸಾಮ್ರಾಜ್ಯ ಹಬ್ಬ ಬಹುದು.

ಸಾಧನಗಳ ಯೋಗ್ಯತೆಯದೇನು ಗತಿ?

ಯಾರ ಸಾಧನಗಳು ಸರ್ವೋತ್ತಮ ಹಾಗೂ ಸರ್ವ ಕಾಲ ಉಳಿಯುವಂಥವು?

ಹಿಂಸೆ; ಸಮಾಜವಾದಿಗಳು ಹೇಳಬಲ್ಲರೇ, ತಮ್ಮ ಅಮೂಲ್ಯ ಧ್ಯೇಯ ಸಾಧಿಸಲಿಕ್ಕೆ ಇತರ ಮೂಲ್ಯ ವಂತ ಧ್ಯೇಯಗಳ ನಾಶವಾಗಲೇ ಇಲ್ಲವೆಂದು? ಖಾಸಗೀ ಆಸ್ತಿ–ಸೊತ್ತು ಅವರು ಇಲ್ಲದಂತೆ ಮಾಡಿ ದರು. ಇದೊಂದು ಮೂಲ್ಯವಂತ ಸಾಧ್ಯವೆಂದು ಒಪ್ಪಿಕೊಂಡರೂ ಆ ಸಾಧ್ಯವನ್ನು ಗಳಿಸಲಿಕ್ಕೆ ಇತರ ಮೂಲ್ಯವಂತ ಸಾಧ್ಯಗಳು ನುಚ್ಚು ನೂರಾಗಲಿಲ್ಲ ವೆಂದು ಸಾಮ್ಯವಾದಿಗಳು ಹೇಳಬಲ್ಲರೇ? ಅವರ ಸಾಧ್ಯವನ್ನು ಸಾಧಿಸಲಿಕ್ಕೆ ಎಷ್ಟು ಜನರ ಹತ್ಯೆ ಆಯಿತು? ಮಾನವೀ ಜೀವನಕ್ಕೆ ಬೆಲೆ ಇಲ್ಲವೇ? ಒಡೆ ಯನ (ಮಾಲಕನ) ಜೀವನವನ್ನು ನಷ್ಟಮಾಡದ ಹೊರತು ಇವರಿಗೆ ಆಸ್ತಿ ಸೊತ್ತು ಪಡೆದುಕೊಳ್ಳಲು ಆಗುತ್ತಿದ್ದಿಲ್ಲವೇ?

ಸರ್ವಾಧಿಕಾರ: ಇದರ ಉದ್ದೇಶ ಕ್ರಾಂತಿಯನ್ನು ಶಾಶ್ವತವಾಗಿ ಕಾಪಾಡಿಕೊಳ್ಳುವುದಾಗಿದೆ. ಅದೊಂದು ಮುಖ್ಯವಾದ ಉದ್ದೇಶ. ಆದರೆ ಸಾಮ್ಯವಾದಿಗಳು ಹೀಗೆ ಹೇಳಬಲ್ಲರೇ?-ಈ ಉದ್ದೇಶದ ಸಾಧನೆಗಾಗಿ ಇತರ ಮೂಲ್ಯವಂತ ಸಾಧ್ಯಗಳು ನಾಶವಾಗಲಿಲ್ಲ ವೆಂದು? ಸರ್ವಾಧಿಕಾರವೆಂದರೆ ಪ್ರಜಾಸತ್ತೆಯ ಸಂಸದೀಯ ರಾಜ್ಯ ವ್ಯವಸ್ಥೆ (parliamentary Governmcnt)ಯ ನಾಸ್ತಿತ್ವ. ಸ್ವಾತಂತ್ರ್ಯದ ನಾಸ್ತಿತ್ವ. ಆದರೆ ಈ ಖುಲಾಸೆ ಸ್ಪಷ್ಟ ವಲ್ಲ. ಪ್ರಜಾಸತ್ತೆಯ ರಾಜ್ಯವ್ಯವಸ್ಥೆಯಲ್ಲಿಯೂ ಸ್ವಾತಂತ್ರ್ಯವಿರುವುದಿಲ್ಲ. ಏಕೆಂದರೆ ಕಾನೂನು (Law) ಅಂದರೆ ಸ್ವಾತಂತ್ರ್ಯದ ನಾಸ್ತಿತ್ವ ಸರ್ವಾಧಿಕಾರ ಮತ್ತು ಪ್ರಜಾಸತ್ತೆಯ ರಾಜ್ಯ ವ್ಯವಸ್ಥೆಗಳಲ್ಲಿ ಭೇದ ವಿರುವುದು ಹೀಗೆ–ಪ್ರಜಾಸತ್ತೆಯಲ್ಲಿ ಪ್ರತಿಯೊಬ್ಬ ನಾಗರಿಕನಿಗೆ ಟೀಕೆ ಮಾಡುವ ಹಕ್ಕು ಮತ್ತು ಕರ್ತವ್ಯ ಎರಡೂ ಇರುತ್ತವೆ. ಕರ್ತವ್ಯ, ಕಾನೂನು ಪಾಲಿಸುವ ಹಕ್ಕು. ಆದರೆ ಸರ್ವಾಧಿಕಾರದಲ್ಲಿ ನಿಮಗೆ ಕಾನೂನು ಪಾಲಿಸುವ ಕರ್ತವ್ಯವಿದೆ; ಟೀಕೆ ಮಾಡುವ ಹಕ್ಕು ಇಲ್ಲ.

ಇನ್ನು ಯಾವ ಸಾಧನಗಳು ಸರ್ವಕಾಲ ಉಳಿಯ ಬಲ್ಲವು ಎಂಬುದನ್ನು ಆಲೋಚಿಸೋಣ-ಜುಲುಮೆ ಬಲಾತ್ಕಾರವೋ ನೈತಿಕ ಮನೋವೃತ್ತಿಯೋ? ಈ ಎರಡರಲ್ಲಿ ಯಾವುದು? ಎಡ್ಮಂಡಬರ್ಕ್ ಅಮೇರಿಕೆಯ ಸ್ವಾತಂತ್ರ್ಯ ಯುದ್ಧದ ಪ್ರಸಂಗದಲ್ಲಿ ಬ್ರಿಟಿಷ್ ಪಾರ್ಲಿಮೆಂಟಿನಲ್ಲಿ ವಸಾಹತುಗಳ ಸ್ವಾತಂತ್ರ್ಯದ ಪರ ವಾಗಿ ವಾದಿಸುತ್ತ ಹೇಳಿದಂತೆ ಜುಲುಮೆ ಸರ್ವಕಾಲ ಉಳಿಯಬಲ್ಲ ಸಾಧನವಲ್ಲ. "ಶಕ್ತಿಯ ಉಪಯೋಗ ತಾತ್ಕಾಲಿಕ. ಅದನ್ನು ಕ್ಷಣಕಾಲ ದುಡಿಸಿಕೊಳ್ಳ ಬಹುದು. ಆದರೆ ಮತ್ತೆ ಅದನ್ನು ದುಡಿಸಿಕೊಳ್ಳುವ ಅವಶ್ಯಕತೆ ಇಲ್ಲವಾಗುವುದಿಲ್ಲ. ಆದರೆ ಯಾವ ರಾಷ್ಟ್ರ ವನ್ನು ಸತತವಾಗಿ ಗೆಲ್ಲುತ್ತಲೇ ಇರಬೇಕಾಗುವುದೋ ಆ ರಾಷ್ಟ್ರದ ರಾಜ್ಯಕಾರಭಾರವನ್ನು ನಡೆಯಿಸಲು ಬರುವಂತೆ ಇಲ್ಲ...ಶಕ್ತಿಯ ಪರಿಣಾಮ ಯಾವಾ ಗಲೂ ಆಗುವುದೆಂಬ ನೇಮವಿಲ್ಲ. ಆಯುಧ, ಯಂತ್ರ ಸಾಮಗ್ರಿಗಳೆಂದರೆ ಗೆಲುವು ಅಲ್ಲ. ಶಕ್ತಿಯು ಸಫಲ ವಾಗದಿದ್ದರೆ ಮತ್ತೆ ಸಖ್ಯ ಮಾಡುವ ಆಸೆ ಉಳಿದಿರು ವುದಿಲ್ಲ. ಸತ್ತೆ, ಅಧಿಕಾರ ಕೆಲಸಲ ಉದಾರ ಧೋರಣೆ

ಯಿಂದ ಕೊಂಡುಕೊಳ್ಳಬಹುದು. ಆದರೆ ನಿಷ್ಕ್ರಿಯ ಪರಾಜಿತ ಹಿಂಸೆಯಿಂದ ಅವು ಬೇಡಿ ಸಿಗಲಾರವು."

ಭಿಖ್ಖುಗಳಿಗ ನೀಡಿದ ಒಂದು ಪ್ರವಚನದಲ್ಲಿ ಬುದ್ಧನು ಧಮ್ಮ ಮಾರ್ಗ ಮತ್ತು ದಂಡನೀತಿ ಇವುಗಳಲ್ಲಿಯ ವ್ಯತ್ಯಾಸ ಸ್ಪಷ್ಟಗೊಳಿಸಿದ್ದಾನೆ. ನೈತಿಕ ಶಕ್ತಿಯು ದುರ್ಬಲವಾಗಿ ಸರ್ವಾಧಿಕಾರ ಶಕ್ತಿಯು ಸಂಚಾರವಾದಾಗ ಸಮಾಜದಲ್ಲಿ ಏನಾಗುವುದೆಂಬುದರ ಯಥಾರ್ಥ ಚಿತ್ರವನ್ನು ಆತ ಲೇಖಿಸಿದ್ದಾನೆ. ಬುದ್ಧನಿಗೆ ಬೇಕಾದದ್ದು, ಪ್ರತಿಯೊಂದು ವ್ಯಕ್ತಿ ನೈತಿಕ ದೃಷ್ಟಿಯಿಂದ ಹೇಗೆ ಮಾರ್ಪಡಬೇಕೆಂದರೆ ಅದು ಸದ್ಧರ್ಮದ ಪಾಲಕನಾಗಬೇಕು.

ರಾಜ್ಯ ಸರ್ಕಾರದ ಲಯ (Withering away of the State)

ಸಾಮ್ಯವಾದಿಗಳೇ ಒಪ್ಪಿಕೊಳ್ಳುತ್ತಾರೆ: ಅವರ ಶಾಶ್ವತ ಸರ್ವಾಧಿಕಾರದ ತತ್ವಪ್ರಣಾಲಿ ಕೆಟ್ಟದೆಂದು ಈ ಅಂತಿಮ ರಾಜ್ಯ ಸರಕಾರ ಕೊನೆಗೂ ಲಯವಾಗತಕ್ಕದ್ದೇ. ಆದರೆ ಅದು ಎಂದು ? ಅದು ಲಯವಾದ ಮೇಲೆ ರಾಜ್ಯದ ಸ್ವರೂಪವೇನಾಗಲಿದೆ ?

ಮೊದಲಿನ ಪ್ರಶ್ನೆಗೆ ಅವರು ನಿಶ್ಚಿತ ಕಾಲ ಹೇಳಲಾರರು, ಕೆಲಕಾಲ ಪೂರ್ಣ ಸರ್ವಾಧಿಕಾರ ಸತ್ತೆ ಒಳಿತಾಗಿರಲು ಶಕ್ಯ. ಪ್ರಜಾಸತ್ತೆಯ ಸಂರಕ್ಷಣೆಯ ದೃಷ್ಟಿಯಿಂದ ಅದು ಸ್ವಾಗತಾರ್ಹ. ಪ್ರಜಾಸತ್ತೆಯ ಮಾರ್ಗದಲ್ಲಿಯ ಅಡೆತಡೆ ಕಲ್ಲುಬಂಡೆ ದೂರಮಾಡಿ ಪ್ರಜಾಸತ್ತೆಯ ಹಾದಿಯನ್ನು ಸುಸಹ್ಯಗೊಳಿಸಿದ ಮೇಲೆ ಈ ಸರ್ವಾಧಿಕಾರ ಸತ್ತೆಯನ್ನು ಏಕೆ ಲೋಪಗೊಳಿಸಬಾರದು ? ಸಾಮ್ರಾಟ ಅಶೋಕನೇ ಉದಾಹರಣೆಯನ್ನು ಹಾಕಿಕೊಟ್ಟಿರುವನಲ್ಲವೇ ? ಆತ ಕಳಿಂಗ ರಾಜ್ಯದ ವಿರುದ್ಧ ಯುದ್ಧ ಸಾರಿದನು. ಆದರೆ ಅನಂತರ ಪೂರ್ತಿ ಹಿಂಸೆಯನ್ನೆ ತ್ಯಾಗಮಾಡಿದನು. ನಮ್ಮ ವಿಜೇತರು ಕೇವಲ ಜೇತರನ್ನೇ ನಿಶ್ಯಸ್ತ್ರ ಮಾಡದೆ ತಾವು ನಿಶ್ಯಸ್ತ್ರರಾದರೆ ಇಡೀ ಭೂಮಂಡಲದಲ್ಲಿ ಶಾಂತಿಯ ಸಾಮ್ರಾಜ್ಯ ಹಬ್ಬಬಹುದು.

ಆದರೆ ಸಾಮ್ಯವಾದಿಗಳು ಇದಕ್ಕೆ ಏನೂ ಉತ್ತರ ನೀಡಿಲ್ಲ. ರಾಜ್ಯ ಸರ್ಕಾರ ಲಯ ಹೊಂದಿದ ಮೇಲೆ ಯಾವ ಸ್ವರೂಪವನ್ನು ಹೊಂದಬಹುದೆಂಬುದರ ಸಮಾಧಾನಕರವಾದ ಉತ್ತರವನ್ನು ಅವರು ಕೊಡಲೊಲ್ಲರು. ಸರಕಾರವು ಎಂದು ಲಯವಾಗುವುದೆಂಬ ಪ್ರಶ್ನೆಗಿಂತ ಅದು ಲಯವಾದ ನಂತರ ರಾಜ್ಯದ ಸ್ವರೂಪ ಏನಾಗಲಿದೆ ?–ಈ ಪ್ರಶ್ನೆ ಹೆಚ್ಚು ಮಹತ್ವದ್ದಾಗಿದೆ. ಆ ಸ್ವರೂಪವು ಅವ್ಯವಸ್ಥೆ–ಅರಾಜಕ ಅವಸ್ಥೆಯದಾದರೆ ? ಹಾಗೆ ಆದರೆ ಸಾಮ್ಯವಾದೀ ರಾಜ್ಯವೇ ನಿರರ್ಥಕವಾದೀತು. ಅದನ್ನು ಶಕ್ತಿಯ (ಶಸ್ತ್ರದ) ಹೊರತು ಸಂರಕ್ಷಿಸಲಿಕ್ಕೆ ಆಗಲಾರದೆಂದು ಆದರೆ ಅದರ ಕೊನೆ ಅರಾಜಕ ಅವ್ಯವಸ್ಥೆಯ ಗೊಂದಲಗೇಡಿನಲ್ಲಿ ಆಗಲಿದ್ದರೆ ಆ ಸಾಮ್ಯವಾದಿ ರಾಜ್ಯದಲ್ಲಿ ಅರ್ಥವೇನು ಉಳಿಯಿತು ? ಶಕ್ತಿ-ಸತ್ತೆಯನ್ನು ತೆಗೆದು ಹಾಕಿದೊಡನೆ ರಾಜ್ಯ (ಶಾಸನ) ಮುಗಿಯಿತು !

ಶಕ್ತಿಯನ್ನು ತ್ಯಜಿಸಿದರೆ ಒಂದೇ ಸಂಗತಿಯು ರಾಜ್ಯವನ್ನು ಕಾಪಾಡಬಲ್ಲದು. ಅದು ಧರ್ಮ. ಆದರೆ ಸಾಮ್ಯವಾದಕ್ಕೆ ಧರ್ಮ ನಿಷಿದ್ಧ. ತ್ಯಾಜ್ಯ. ಸಾಮ್ಯವಾದಕ್ಕೆ ಸಹಾಯ ಮಾಡಬಹುದಾದ ಧರ್ಮ ಮತ್ತು ಸಹಾಯ ಮಾಡಲಾರದ ಧರ್ಮ-ಇವುಗಳಲ್ಲಿಯ ಭೇದವು ಕೂಡ ಅವರಿಗೆ ತಿಳಿಯುವುದಿಲ್ಲ. ಸಾಮ್ಯವಾದಿಗಳು ಕ್ರೈಸ್ತ ಧರ್ಮದ ಕುರಿತ ತಮ್ಮ ದ್ವೇಷವನ್ನು ಬೌದ್ಧ ಧರ್ಮಕ್ಕೂ ಅನ್ವಯಿಸಿದ್ದಾರೆ. ಅವೆರಡರಲ್ಲಿಯ ವ್ಯತ್ಯಾಸವನ್ನು ಕೂಡ ಅವರು ನೋಡಲು ಸಿದ್ಧರಿಲ್ಲ. ಕ್ರೈಸ್ತ ಧರ್ಮದ ಬಗೆಗೆ ಅವರ ಆರೋಪ ಎರಡು ಬಗೆಯದು. ಮೊದಲನೆಯ ಆರೋಪವೆಂದರೆ ಕ್ರೈಸ್ತ ಧರ್ಮ ಜನರನ್ನು ಬೇರೊಂದು (ಪರ) ಲೋಕದತ್ತ ನೋಡಲು ಹಚ್ಚುತ್ತದೆ. ಆದರೆ ಇಂಥ ಆರೋಪ ಬೌದ್ಧ ಧರ್ಮದ ಕುರಿತು ಹೊರಿಸಲು ಬರುವಂತಿಲ್ಲ. ಇನ್ನು ಎರಡನೆಯ ಆರೋಪವನ್ನು ಒಂದೇ ವಾಕ್ಯದಲ್ಲಿ ಹೇಳುವುದಾದರೆ-ಧರ್ಮವು ಅಫೀಮಿನ ಗುಳಿಗೆ. ಈ ಆರೋಪ ಬೈಬಲ್ಲಿನಲ್ಲಿ ಒದಗುವ 'ಪರ್ವತದ ಮೇಲಿನ ಪ್ರವಚನ' (Sermon on the mount) ವನ್ನು ಕುರಿತು ಇದೆ. ಇದನ್ನೂ ಬೌದ್ಧ ಧರ್ಮದ ವಿಷಯಕ್ಕೆ ಹೇರಲು ಬರುವಂತಿಲ್ಲ. ಬುದ್ಧನು ಮಾಡಿದ ಧರ್ಮ ಪ್ರವಚನದಲ್ಲಿ ಹೇಳುತ್ತಾನೆ. ಸಂಪತ್ತು ಶೇಖರಿಸಿರಿ (ಗಳಿಸಿರಿ) ಅನಾಥ ಪಿಂಡಕನಿಗೆ ಬುದ್ಧನು ಮಾಡಿದ ಉಪದೇಶವೇ ಇದು. ಅನಾಥ ಪಿಂಡಕನು ಭಗವಾನನಿಗೆ ಕೇಳಿದ : ಯಾವ ಸಂಗತಿಗಳು ಗೃಹಸ್ಥನಿಗೆ ಆನಂದಮಯ, ಸುಖಾವಹ ಆದರೆ ಪಡೆಯಲು ಕಠಿಣವಾಗಿವೆ ? ಭಗವಂತ ಉತ್ತರಿಸಿದ :- "ಕಾಯಿದೆಯಂತೆ ಸಂಪತ್ತು ಗಳಿಸುವುದು ಮತ್ತು ನಿಮ್ಮ ಆಪ್ತೇಷ್ಟ ಬಂಧು ಬಳಗದವರು ಕಾಯಿದೆಯಂತೆಯೇ ಧನಲಾಭ ಮಾಡಿಕೊಳ್ಳುವರೋ ಎಂದು ನೋಡಿಕೊಳ್ಳುವುದು. ಧನವನ್ನು ಕಾಯಿದೆಯಿಂದ, ಸತ್ಯದಿಂದ, ಉದ್ಯೋಗದಿಂದ, ಸ್ವಕಷ್ಟದಿಂದ ಬೆವರಿಳಿಸಿ ಗಳಿಸುವುದು ಬಹಳ ಲಾಭದಾಯಕ. ಇದರಿಂದ ಗೃಹಸ್ಥನು ತನ್ನನ್ನು ತನ್ನ ತಾಯ್ತಂದೆ ಮಡದಿ ಮಕ್ಕಳು ಆಳು ಬಳಗ ಗೆಳೆಯರನ್ನೆಲ್ಲ ಸುಖಿಯಾಗಿ ಉತ್ಸಾಹಿಯಾಗಿ ಮಾಡಿ ಸುಖವನ್ನು ಕಾಪಾಡಿಕೊಳ್ಳುತ್ತಾನೆ".

"ಶಕ್ತಿಯ ಉಪಯೋಗ ತಾತ್ಕಾಲಿಕ. ಅದನ್ನು ಕ್ಷಣಕಾಲ ದುಡಿಸಿಕೊಳ್ಳಬಹುದು. ಆದರೆ ಮತ್ತೆ ಅವನ್ನು ದುಡಿಸಿಕೊಳ್ಳುವ ಆವಶ್ಯಕತೆ ಇಲ್ಲವಾಗುವುದಿಲ್ಲ."

ಶಕ್ತಿ–ಸತ್ತೆ ಇಲ್ಲವಾಗಿಸಿದ ಮೇಲೆ, ಸಾಮ್ಯವಾದವನ್ನು ಉಳಿಸಿಕೊಳ್ಳಲು ಬೌದ್ಧಮತದ ಅಂತಿಮ ಪರ್ಯಾಯವನ್ನು ಯೋಜಿಸಲು ರಶಿಯನ್ ಜನತೆ ಆಲೋಚಿಸಿದಂತೆ ಕಾಣುವುದಿಲ್ಲ. ರಶಿಯಾದ ಜನತೆಗೆ ಸ್ವಂತದ ಸಾಮ್ಯವಾದದ ಬಗೆಗೆ ಅಭಿಮಾನವಿದೆ. ಆದರೆ ಅವರು ಮರೆಯುವ ಒಂದು ಸಂಗತಿಯೆಂದರೆ ಬುದ್ಧನು ಆಶ್ಚರ್ಯಕ್ಕಿಂತಲೂ ಆಶ್ಚರ್ಯಕರವಾದ ಸಾಮ್ಯವಾದವನ್ನು ಸಂಘ ರೂಪದಲ್ಲಿ ಸರ್ವಾಧಿಕಾರಕ್ಕೆ ಹೊರತಾಗಿ ನಿರ್ಮಿಸಿದನು. ಆ ಸಾಮ್ಯವಾದವು ಸಣ್ಣ ಪ್ರಮಾಣದಲ್ಲಿ ಇತ್ತು. ಇರಬಹುದು, ಆದರೆ ಸರ್ವಾಧಿಕಾರ ಸತ್ತೆಯ ಹೊರತಾಗಿ ಆ ಸಾಮ್ಯವಾದವಿತ್ತು. ಈ ಅದ್ಭುತವನ್ನು ಮಾಡಲು ಲೆನಿನ್ ಅಸಮರ್ಥನಾದನು.

ಬುದ್ಧನ ಮಾರ್ಗ ಬೇರೆಯಾಗಿತ್ತು. ಮಾನವನ ಮನಸ್ಸಿನ ಪರಿವರ್ತನೆ ಅವನ ಮಾರ್ಗವಾಗಿತ್ತು. ಮಾನವನ ಪ್ರವೃತ್ತಿಯನ್ನು ಬದಲಿಸಿದರೆ ಆತ ಮಾಡುವುದೆಲ್ಲ ಸ್ವಯಂ ಸ್ಫೂರ್ತಿಯಿಂದ ಆಗಬೇಕು ಜುಲುಮೆ ಒಲುಮೆಗಳಿಂದ ಹೊರತಾಗಿ ಇರಬೇಕು. ಈ ಪ್ರವೃತ್ತಿ ಪರಿವರ್ತನೆಯ ಮುಖ್ಯ ಸಾಧನವೆಂದರೆ "ಧಮ್ಮ" ಮತ್ತು ಆ ಧಮ್ಮದ ಸತತ ಪ್ರವಚನ. ಬುದ್ಧನ ಮಾರ್ಗವೆಂದರೆ, ಮನುಷ್ಯನಿಗೆ ಅವನ ಮನಸ್ಸಿನ ವಿರುದ್ಧ ಕೆಲಸ ಮಾಡಲು ಜುಲುಮೆ ಮಾಡದಿರುವುದು-ಅದು ಅವನ ಕಲ್ಯಾಣಕ್ಕಾಗಿಯೇ ಆಗಿರಲೊಲ್ಲದೇಕೆ. ಬುದ್ಧನ ಮಾರ್ಗವೆಂದರೆ, ಮನುಷ್ಯನ ಮನಸ್ಸಿನ ಪ್ರವೃತ್ತಿಯನ್ನೇ ಬದಲಿಸುವುದು. ಆಗ ಆತನು ಸ್ವಯಂಸ್ಫೂರ್ತಿಯಿಂದಲೇ, ಹಿಂದೆ ಮಾಡದಿರಬಹುದಾದುದನ್ನು ಮಾಡಬಹುದು.

ರಶಿಯನ್ ಸಾಮ್ಯವಾದೀ ಸರ್ವಾಧಿಕಾರ ಸತ್ತೆಯು ಬಹಳಷ್ಟು ಸಂಗತಿಗಳನ್ನು ತನ್ನ 'ಜಮಾ ಖಾತೆ'ಗೆ ಸೇರಿಸಿಕೊಂಡಿದೆ–ಎಂದು ಹೇಳುತ್ತಾರೆ. ಇದನ್ನು ಯಾರೂ ಅಲ್ಲಗಳೆಯಲಾರರು. ಅದ್ದರಿಂದಲೇ ನಾನು ಹೇಳುತ್ತೇನೆ-ರಶಿಯನ್ ಸರ್ವಾಧಿಕಾರಿ ಸತ್ತೆ ಹಿಂದುಳಿದ ರಾಷ್ಟ್ರಗಳಿಗೆ ಅವಶ್ಯಕವಿದೆ. ಆದರೆ, ಇದೇನು ಶಾಶ್ವತವಾದ ಸರ್ವಾಧಿಕಾರ ಸತ್ತೆಗೆ ಕರೆ ಅಲ್ಲ (ಅಂದರೆ ನನಗೆ ಶಾಶ್ವದ ಸ್ವರೂಪದ ಸರ್ವಾಧಿಕಾರ ಸತ್ತೆ ಮಾನ್ಯವಿಲ್ಲ). ಮಾನವತೆಗೆ ಆರ್ಥಿಕ ಮೂಲ್ಯಗಳು ಬೇಕು. ಇಷ್ಟೇ ಅಲ್ಲ. ಆಧ್ಯಾತ್ಮಿಕ ಮೂಲ್ಯಗಳನ್ನೂ ಕಾಪಾಡಿಕೊಳ್ಳಬೇಕು. ಆದರೆ ಶಾಶ್ವತ ಸರ್ವಾಧಿಕಾರ ಸತ್ತೆ ಆಧ್ಯಾತ್ಮಿಕ ಮೂಲ್ಯಗಳತ್ತ ದುರ್ಲಕ್ಷ್ಯ ಮಾಡಿದೆ. ಕಾರ್ಲ್‌ಮ್ಯಾರ್ಕ್ಸನು ರಾಜಕೀಯ ಅರ್ಥಶಾಸ್ತ್ರವನ್ನು ಹಂದಿಯ ನೀತಿಯೆಂದು ಕರೆಯುತ್ತಾನೆ (Political economy is pig economy) ಅರ್ಥಾತ್ ಕಾರ್ಲ್‌ಮ್ಯಾರ್ಕ್ಸನದು ತಪ್ಪು ಹೇಳಿಕೆ. ಮನುಷ್ಯನಿಗೆ ಐಹಿಕ ಸುಖಗಳು ಬೇಕು. ಸಾಮ್ಯವಾದೀ ತಂತ್ರಜ್ಞಾನವೂ ಅಷ್ಟೇ ತಪ್ಪಾಗಿದೆ. ಏಕೆಂದರೆ ಅದರ ಧ್ಯೇಯ ಈ ಹಂದಿಯನ್ನು ಕೊಬ್ಬಿಸುವುದರ ಆಚೆಗೆ ಹೋಗುವುದಿಲ್ಲ. ಮನುಷ್ಯ ಹಂದಿಗಿಂತ ಬೇರೆ ಅಲ್ಲವೇನೋ ಎಂಬಂತೆ ! ಮಾನವನು ಐಹಿಕ ದೃಷ್ಟಿಯಿಂದ, ಹಾಗೆಯೇ ಆಧ್ಯಾತ್ಮಿಕ ದೃಷ್ಟಿಯಿಂದಲೂ ಬೆಳೆಯಬೇಕು. ನವನಿರ್ಮಿತಿಯ ಅಸ್ತಿವಾರ ಹಾಕಲು ನೋಡುವ ಸಮಾಜದವರ್ಣನೆಯನ್ನು ಫ್ರೆಂಚ್ ರಾಜ್ಯಕ್ರಾಂತಿಯು ಸೂಚಿಯಾಗಿ ಮೂರು ಶಬ್ದಗಳಲ್ಲಿ ಮಾಡಿದೆ–ಸ್ವಾತಂತ್ರ್ಯ, ಬಂಧುತ್ವ ಮತ್ತು ಸಮತೆ. ನಾವು ರಶಿಯನ್ ಕ್ರಾಂತಿಯನ್ನು ಸ್ವಾಗತಿಸೋಣ. ಏಕೆಂದರೆ ಅದು ಸಮತೆಯನ್ನು ತರುತ್ತದೆ. ಆದರೆ ಅದರೊಂದಿಗೇ ಸಮತೆಯನ್ನು ಸ್ಥಾಪಿಸಿದ ಮಾತ್ರಕ್ಕೆ ಸಮಾಜವು ಬಂಧುತ್ವವನ್ನಾಗಲಿ, ಸ್ವಾತಂತ್ರ್ಯವನ್ನಾಗಲಿ ಹೋಮಿಸಲು ಸಾಧ್ಯವಿಲ್ಲ. ಬಂಧುತ್ವದ ಹೊರತು ಸ್ವಾತಂತ್ರ್ಯದ ಹೊರತು ಸಮತೆಗೆ ಏನೂ ಬೆಲೆಯಿಲ್ಲ. ನನಗೆ ಅನಿಸುವುದೇನೆಂದರೆ-ಈ ಮೂರು ಸಂಗತಿಗಳು ಒಟ್ಟಾಗಿ ಒಂದೆಡೆಗೆ ನಲಿಯಲು ಸಾಧ್ಯ-ಬುದ್ಧನ ಮಾರ್ಗದಲ್ಲಿ ಸಾಗಿದರೆ. ಸಾಮ್ಯವಾದವು ಈ ಮೂರರಲ್ಲಿ ಒಂದನ್ನೇ ತರಬಲ್ಲದು ; ಎಲ್ಲವನ್ನೂ ಅಲ್ಲ.

●

"Buddha or Karl Marx"- ಡಾ॥ ಅಂಬೇಡ್ಕರರ ಅಪ್ರಕಾಶಿತ ಇಂಗ್ಲಿಷ್ ಪ್ರಬಂಧದ ಅನುವಾದ, ಮರಾಠಿಯಿಂದ.

ಅನುವಾದಕರು : ಗೌರೀಶ ಕಾಯ್ಕಿಣಿ. ಲೇಖಕ ಮತ್ತು ಪತ್ರಿಕೋದ್ಯಮಿ. ಗೋಕರ್ಣ, ಉತ್ತರಕನ್ನಡ ಜಿಲ್ಲೆ, 581 236.

ನಿಮ್ಮ ಹತ್ತಿರಕ್ಕೆ ನೀರು ತರಲು ನಾವೆಷ್ಟು ದೂರ ಹೋಗಿದ್ದೇವೆ!

ರಾಜ್ಯಾದ್ಯಂತ 98,496 ಕೊಳವೆ ಬಾವಿಗಳು

24 ದಶಲಕ್ಷ ಬಾಯಾರಿದ ಜನಕ್ಕೆ ನೀರೊದಗಿಸುತ್ತಿವೆ

ಕುಡಿಯುವ ನೀರು ಪ್ರತಿಯೊಬ್ಬ ಮನುಷ್ಯನಿಗೂ ಅತ್ಯಾವಶ್ಯ. ಆದ್ದರಿಂದಲೇ ಕರ್ನಾಟಕ ಸರ್ಕಾರವು ಕುಡಿಯುವ ನೀರೊದಗಿಸುವ ಯೋಜನೆಯನ್ನು ಆದ್ಯ ಗಮನದಲ್ಲಿರಿಸಿಕೊಂಡಿದೆ.

ಸರ್ಕಾರವು (ಪಟ್ಟಿಯಲ್ಲಿರುವಂತೆ) ದಿನಕ್ಕೆ 27 ಕೊಳವೆ ಬಾವಿಗಳನ್ನು ಕೊರೆಯುವ ವೇಗ ಗತಿಯಲ್ಲಿ ಕೇವಲ ನಾಲ್ಕು ವರ್ಷಗಳಲ್ಲಿ 50,000 ಬಾವಿಗಳನ್ನು ತೋಡಿವೆ. ಈ ಸಂಖ್ಯೆಯು ಸ್ವಾತಂತ್ರ್ಯಾನಂತರದಿಂದ ಮಾರ್ಚ್ 31, 1982 ರವರೆಗೆ ಕೊರೆಯಲಾದ ಬಾವಿಗಳ ಸಂಖ್ಯೆಗೆ ಬಹುತೇಕ ಸಮೀಪ! ಇಂದು 98,496 ಕೊಳವೆ ಬಾವಿಗಳು ಪ್ರತಿದಿನ 24 ದಶಲಕ್ಷ ಜನರಿಗೆ ನೀರೊದಗಿಸುತ್ತಿವೆ. ಇವು ಕರ್ನಾಟಕದ ಬಹಳಷ್ಟು ಹಳ್ಳಿಗಳ ಕುಡಿಯುವ ನೀರಿನ ಸಮಸ್ಯೆಯನ್ನು ಪರಿಹರಿಸಿವೆ. ಇಷ್ಟರಲ್ಲೇ ಇನ್ನುಳಿದ ಶೇಕಡ 20 ಹಳ್ಳಿಗಳಲ್ಲೂ ಕೊಳವೆ ಬಾವಿಗಳಾಗಿ ನೀರು ತರಲಿವೆ. ರಾಷ್ಟ್ರದ 6 ಲಕ್ಷ ಕೊಳವೆ ಬಾವಿಗಳ ಪೈಕಿ 1:6 ಭಾಗ (1 ಲಕ್ಷ) ಬಾವಿಗಳು ಕರ್ನಾಟಕದಲ್ಲಿವೆ.

ಇಂತಹ ಸಾಧನೆಯ ಮೊದಲ ರಾಜ್ಯ ಕರ್ನಾಟಕವಾಗಿದೆ.

ಭರವಸೆಗಳನ್ನು ಕಾರ್ಯರೂಪಗೊಳಿಸುವುದು ಕಠಿಣ ಪರಿಶ್ರಮದ ಕೆಲಸ. ಅಂತಹ ಪರಿಶ್ರಮವನ್ನು ಸ್ವೀಕರಿಸಲು ಸರ್ಕಾರವು ಸದಾ ಸಿದ್ಧವೆಂದು ಈ ಸಾಧನೆ ನಿರೂಪಿಸುತ್ತದೆ.

1982-1986 ರ ಅವಧಿಯಲ್ಲಿ ಕರ್ನಾಟಕದಲ್ಲಿ ಕೊರೆಯಲಾದ ಬಾವಿಗಳ ಸಂಖ್ಯಾ ವಿವರ

ಮಾರ್ಚ್ 31, 1982 ರವರೆಗೆ-47,726

ವರ್ಷ	ಬಾವಿಗಳ ಸಂಖ್ಯೆ
1982-83	9,978
1983-84	15,218
1984-85	13,830
1985-86	10,294
1986-87	1,450
	50,770

ಕುಡಿಯುವ ನೀರಿನ ಪೂರೈಕೆ ನಮ್ಮ ವಾಗ್ದಾನ

● ಕರ್ನಾಟಕ ವಾರ್ತೆ

ಮೀಸಲಾತಿಯ ಇತ್ತೀಚಿನ ಆಯಾಮಗಳು

ಹಿಂದೆ ಧಾರ್ಮಿಕ ಮನ್ನಣೆಯಿಂದ ಜಾರಿಯಲ್ಲಿದ್ದ ಸಹಸ್ರಾರು ವರ್ಷಗಳ ಮೀಸಲಾತಿಯಿಂದಾಗಿ ದಲಿತಜನಾಂಗಗಳಲ್ಲಿ ಅರಳಬಹುದಾಗಿದ್ದ ಲಕ್ಷ ಲಕ್ಷ ಪ್ರತಿಭಾವಂತ ವಿಜ್ಞಾನಿಗಳು, ಮುತ್ಸದ್ಧಿಗಳು, ಕಲಾಕಾರರು ಅರಳುವ ಮೊದಲೇ ಸುಟ್ಟು ಕರಕಲಾದರು.

ಡಾ॥ ನಾಗರಾಜ್ ಭದ್ರಶೆಟ್ಟಿ, ಗುಂಡ್ಲುಪೇಟೆ

ಪ್ರಬಲ ಕೋಮಿಗೆ ಸೇರಿದ ಜನರು ಸುಸಂಘಟಿತರಾಗಿ ಕಾಲದಿಂದ ಕಾಲಕ್ಕೆ ಮೀಸಲಾತಿ ವಿರುದ್ಧವಾಗಿ ದೇಶದ ವಿಭಿನ್ನ ಭಾಗಗಳಲ್ಲಿ ಪ್ರಬಲ ಚಳುವಳಿಗಳನ್ನು ನಡೆಸುತ್ತಿರುವುದು ಸಾಮಾನ್ಯವಾಗಿಬಿಟ್ಟಿದೆ. ಗುಜರಾತಿನಲ್ಲಿ ಹತ್ತಿದ ದಳ್ಳುರಿ ಆಂಧ್ರದಲ್ಲೂ ಹರಡಿ ಇತ್ತೀಚೆಗೆ ಕರ್ನಾಟಕವನ್ನು ಹಾದು ಹೋದದ್ದು ಅತ್ಯಂತ ನಾಚಿಕೆಗೇಡಿನ ವಿಚಾರ. ಈ ಸಾಮಾಜಿಕ, ರಾಜಕೀಯ ವ್ಯವಸ್ಥೆಯಲ್ಲಿ ನಿಜಕ್ಕೂ ಅನ್ಯಾಯಕ್ಕೆ ಒಳಗಾದ ಶೋಷಿತ ದಲಿತ ಜನಾಂಗಗಳಿಗೆ ಒಗ್ಗಟ್ಟಾಗಿ ಚಳುವಳಿ ನಡೆಸಲು ಆರ್ಥಿಕ ಶಕ್ತಿ ಇಲ್ಲ. ರಾಜಕೀಯ ಬೆಂಬಲ ಇಲ್ಲ. ಮಠಮಾನ್ಯಗಳ ಮನ್ನಣೆ, ಕುಮ್ಮಕ್ಕು ಇಲ್ಲ. ಹೀಗಾಗಿ ಹಸಿವಿನಿಂದ ಕೂಗಲು ಶಕ್ತಿಯಿಲ್ಲದವರ ಮೌನವನ್ನು ಸಂತೃಪ್ತಿಯ ಮೌನವೆಂದು, ಹೊಟ್ಟೆತುಂಬಾ ಉಂಡು ಕೂಗುವವರ ಆಕ್ರೋಶವನ್ನು ಅನ್ಯಾಯದ ವಿರುದ್ಧದ ಪ್ರತಿಭಟನೆಯೆಂದು ಪರಿಣಾಮಕಾರಿಯಾಗಿ ಬಿಂಬಿಸುವಲ್ಲಿ ನಮ್ಮ ಸಮಾಜದ ಎಲ್ಲಾ ವೇದಿಕೆಗಳು ಮಾಧ್ಯಮಗಳು ಯಶಸ್ವಿಯಾಗಿವೆ. ಇಂತಹ ಸಂದರ್ಭಗಳಲ್ಲಿ ಸೋತ ರಾಜಕಾರಣಿಗಳು ತಮ್ಮ ರಾಜಕೀಯ ಪುನರ್‌ಜನ್ಮಕ್ಕಾಗಿ ಜನರ ಭಾವನೆಗಳನ್ನು ಅವೈಜ್ಞಾನಿಕವಾಗಿ ಕೆರಳಿಸಿ ತಮ್ಮ ಬೇಳೆಕಾಳು ಬೇಯಿಸಿಕೊಳ್ಳುವ ನರಿಬುದ್ಧಿಯವರಾಗುತ್ತಾರೆ. ಹೀಗೆ ಒಂದು ಅವೈಜ್ಞಾನಿಕ ಸಂಘಟನೆಗೆ "ಸಮೂಹ ಸನ್ನಿ" ಬಡಿದು ಐತಿಹಾಸಿಕ ಸತ್ಯ, ವಾಸ್ತವಸ್ಥಿತಿಗಳು ಮರೆತುಹೋಗಿ ಗೊಂದಲಗಳೇ ದಟ್ಟಗೊಳ್ಳುತ್ತವೆ.

ಮೀಸಲಾತಿ ಮೂಲತಃ ಸಾವಿರಾರು ವರ್ಷಗಳಿಂದ ಸಮಾಜದ ಬಲಿಷ್ಟಜನರಿಂದ ಸರ್ವಾಂಗೀಣವಾಗಿ ತುಳಿಯಲ್ಪಟ್ಟ ದಲಿತ ಜನಾಂಗಕ್ಕೆ ಐತಿಹಾಸಿಕನ್ಯಾಯವನ್ನು ಒದಗಿಸಿಕೊಡುವಲ್ಲಿನ ಒಂದು ಆಡಳಿತದ ಪ್ರಜ್ಞಾವಂತ ನ್ಯಾಯಯುತ ಪ್ರಾರಂಭ ಪ್ರಯತ್ನ.

ಆದರೆ ಇದಕ್ಕೆ ತದ್ವಿರುದ್ಧವಾದ ಒಂದು ಅನೈತಿಕ ಮೀಸಲಾತಿ ವ್ಯವಸ್ಥೆ [illegible] ವರ್ಷಗಳ ಕಾಲ ಅನಿರ್ಬಾಧಿತವಾಗಿ ಸ್ವೀಕೃತ ಮೌಲ್ಯವಾಗಿ ಪ್ರಚಲಿತವಿತ್ತು. ಮೈಬಗ್ಗಿಸಿ ದುಡಿಯಲಾರದ ನಿರಂತರ ಸುಖಲೋಲುಪ್ತತೆಯಲ್ಲಿ ತೇಲಬಯಸಿದ ಜಾಣ ಜನಾಂಗವೊಂದು ಸೃಷ್ಟಿಸಿದ ಚಾತುರ್ವರ್ಣ ವ್ಯವಸ್ಥೆಯೇ ಈ ಮೀಸಲಾತಿ ವ್ಯವಸ್ಥೆ. ಇದಕ್ಕೆ ಧಾರ್ಮಿಕ ಮನ್ನಣೆ ಇದ್ದಿದ್ದರಿಂದ ಇದರ ಬೇರುಗಳು ಆಳಕ್ಕೆ ಇಳಿದವು. ಇದರ ಒಟ್ಟು ಪರಿಣಾಮ ಎಲ್ಲ ಸಾಮಾಜಿಕ ಅನಿಷ್ಟಗಳು ದಲಿತನ ಹೆಗಲೇರಿ ಕುಂತವು. ಈ ಮೀಸಲಾತಿಯ ಬಹುಮುಖ ಪ್ರಯೋಜನ ಪಡೆದ ಹಿರಿಯ ಅದೃಷ್ಟವಂತ ಸಹೋದರರು ತಮ್ಮ ಕಿರಿಯ ಸೋದರನ ಮೇಲೆ ತಮ್ಮ ಕಕ್ಕಸದ ಬುಟ್ಟಿಯನ್ನು ನಿರಂತರ ಇರಿಸುವ ಸಾಮಾಜಿಕ ಪಾಪ ಮಾಡಿದರು. ಊರಿನ ಆಚೆ ದೂರ ಇಡುವ ದ್ರೋಹ ಮಾಡಿದರು. ಆದರೆ ಹೀನಾಯವಾದ ಚಾಕರಿ ಮಾಡಿಸಿಕೊಳ್ಳಲು ಮಾತ್ರ ಮರೆಯಲಿಲ್ಲ. ಹಿಟ್ಲರ್‌ನ ಪಾಶವೀ ಮನೋಧರ್ಮವನ್ನೂ ಮೀರಿದ ಇಂಥ ಮನೋಧರ್ಮ ಭಾರತೀಯ ಮನೋಧರ್ಮವಾಗಿ ಮುಂದುವರೆಯಿತು.

ಇಂತಹ ವ್ಯವಸ್ಥಿತ ಶೋಷಣೆ ಭಾರತೀಯ ಸಾಮಾಜಿಕ ವ್ಯವಸ್ಥೆಯಲ್ಲಿ ಸಹಸ್ರಾರು ವರ್ಷಗಳಿಂದ ನಿರಂತರವಾಗಿ ನಡೆದುಬಂದಿದೆ. ಹೀಗಾಗಿ ಇವರ ತುಳಿತಕ್ಕೆ ಒಳಗಾದ ದಲಿತ ಜನಾಂಗಗಳ ಮಧ್ಯ ಅರಳಬಹುದಾದ ಪ್ರತಿಭೆಯ ಕುಸುಮಗಳು ರಾಕ್ಷಸೀ ವ್ಯವಸ್ಥೆಯ ಕಾಲುಳಿತಕ್ಕೆ ಸಿಕ್ಕು ನಲುಗಿ ಹೋದವು. ಈ ಲೆಕ್ಕದಲ್ಲಿ ದಲಿತ ಜನಾಂಗಗಳಲ್ಲಿ ಅರಳಬಹುದಾಗಿದ್ದ ಲಕ್ಷ ಲಕ್ಷಾಂತರ ಪ್ರತಿಭಾವಂತ ವಿಜ್ಞಾನಿಗಳು, ಮುತ್ಸದ್ಧಿಗಳು, ಕಲಾಕಾರರು, ಪಂಡಿತರು ಅರಳುವ ಮೊದಲೇ ಸುಟ್ಟು ಕರಕಲಾದರು. ಅವರ ನೋವು, ಹತಾಶೆ, ಸಿಟ್ಟು, ನಿಟ್ಟುಸಿರುಗಳು ಅವರ ಎದೆಗಳನ್ನೇ ಸುಟ್ಟು ಅವರನ್ನು ಕಪ್ಪು ಮಾಡಿದವು.

ಇತಿಹಾಸದ ಉದ್ದಕ್ಕೂ ಈ ಜನಾಂಗವನ್ನು ಸಮಾಜದ ಪ್ರಬಲ ವರ್ಗದವರು ತುಳಿದ ಆಘಾತ ಎಷ್ಟು ಆಳವಾದದ್ದೆಂದರೆ ತುಳಿತಕ್ಕೊಳಗಾದ ಜನಾಂಗದವರೇ ಈ ಮಾನವೀಕೃತ ಅಪಮಾನ–ದುರವಸ್ಥೆಗಳನ್ನು ದೈವೀ ನಿಯಮವೆಂದೇ ನಂಬಿ ಅದನ್ನು ಮನಃಪೂರ್ವಕವಾಗಿ ಸ್ವೀಕರಿಸಿದರು. ಸಮಾಜದ ನಿರೀಕ್ಷೆಯಂತೆಯೇ ಬದುಕಿ ಬಂದರು. ತಮ್ಮ ದುಃಸ್ಥಿತಿಯ ಅರಿವು ಮರೆತರು. ಬಂಡೇಳುವ ಕ್ರೋಧದ ಕಿಡಿಯು ಹೊತ್ತದಂತೆ ಇವರಲ್ಲಿ ಆಳವಾದ ಪಾಪಪ್ರಜ್ಞೆಯನ್ನು ಪುರೋಹಿತಶಾಹಿ, ಅಧಿಕಾರಶಾಹಿ, ಜಮೀನ್ದಾರಿಶಾಹಿಗಳು ಧರ್ಮ, ದೇವರು, ಹರಿಕತೆಗಳ ಮೂಲಕ ಇವರಲ್ಲಿ ತುಂಬಿದರು. ಹುಟ್ಟುತ್ತಲೇ ಈ ಪಾಪಪ್ರಜ್ಞೆಯನ್ನು ಹೊತ್ತುಕೊಂಡು ಬಂದ ಈ ಜನಾಂಗ ಬೆಳೆಯುತ್ತಾ ಈ ಪಾಪಪ್ರಜ್ಞೆಯನ್ನು ಹೆಚ್ಚಿಸಿಕೊಂಡೇ ಅಧೋಗತಿಯ ಬದುಕು ಸವೆಸಿದರು. ಇವರನ್ನು ಮೇಲಕ್ಕೆ ಎತ್ತುವ, ಇವರಿಗೆ ಪುನರ್ಜನ್ಮ ಹೊಸ ಬದುಕು ಮಾನವೀಯ ಘನತೆಗೆ ಒಪ್ಪುವ ಸಹಜ ಸ್ಥಾನಮಾನಗಳನ್ನು ಮರಳಿ ದೊರಕಿಸಿಕೊಡಲು ಯಾವುದೇ ಪ್ರಬಲ ಚಳುವಳಿ ಭಾರತೀಯ ಸಾಮಾಜಿಕ ವ್ಯವಸ್ಥೆಯಲ್ಲಿ ಇತಿಹಾಸದ ಉದ್ದಕ್ಕೂ ನಡೆದುಬಂದಿಲ್ಲ. ಅಮೆರಿಕಾದಲ್ಲಿ ನೀಗ್ರೋಗಳನ್ನು ಸಂಘಟಿಸಿದ ಮಾರ್ಟಿನ್ ಲೂಥರ್ ಕಿಂಗ್‌ನಂತಹ ಒಬ್ಬ ಬದ್ಧ ವ್ಯಕ್ತಿ ಸಹ ಮುಂದೆ ಬರಲಿಲ್ಲ. ಡಾ॥ ಬಿ. ಆರ್. ಅಂಬೇಡ್ಕರ್‌ರವರಂತಹ ಪ್ರತಿಭಾವಂತ ದಲಿತರ ನೋವು–ಹತಾಶೆ, ಹೋರಾಟ, ಪ್ರತಿಭಟನೆಗಳೂ ಸಹ ಪ್ರಬಲ ಸಮುದಾಯಿಕ ರೂಪ ಪಡೆಯಲಿಲ್ಲ. ಹೀಗಾಗಿ ಅವರ ಹೋರಾಟಗಳು, ಫಲ–ವಿಫಲತೆಗಳು ವೈಯಕ್ತಿಕ ಮಟ್ಟದಿಂದ ದೂರವಾಗಿ ಕ್ರಿಯಾತ್ಮಕ ಚಳುವಳಿಯಾಗಲಿಲ್ಲ. ಇದಕ್ಕೆ ಅಂಬೇಡ್ಕರ್‌ರವರ ಹೋರಾಟದಲ್ಲಿನ ಕೊರತೆ ಕಾರಣವಲ್ಲ. ದಟ್ಟ ಸಾಮಾಜಿಕ ವ್ಯವಸ್ಥೆಯು ಬಲಿಷ್ಠ ಕಡೆ ಅಷ್ಟು ಪ್ರಬಲವಾಗಿತ್ತು.

(16 ನೇ ಪುಟಕ್ಕೆ)

ನಿಮ್ಮ ಮಗುವಿಗೆ "ಎ" ಜೀವಸತ್ವದ ಅಗತ್ಯವಿದೆ

ಮಕ್ಕಳಲ್ಲಿ ಅದರಲ್ಲೂ 1 ರಿಂದ 4 ವರ್ಷದೊಳಗಿನ ಮಕ್ಕಳಲ್ಲಿ ಕಂಡು ಬರುವ ದೃಷ್ಟಿದೋಷ ಹಾಗೂ ಅಂಧತ್ವಕ್ಕೆ 'ಎ' ಜೀವಸತ್ವದ ಕೊರತೆಯೇ ಮುಖ್ಯ ಕಾರಣ

"ಎ" ಅನ್ನಾಂಗ ಕೊರತೆಯಿಂದ ರಾತ್ರಿ ಕುರುಡುತನ ಬರುತ್ತದೆ.

ನಿಮ್ಮ ಮಗುವಿನ ಕಣ್ಣು ಮತ್ತು ಚರ್ಮ ಆರೋಗ್ಯದಿಂದಿರಬೇಕಾದರೆ ಅದರ ಆಹಾರದಲ್ಲಿ ಸಾಕಷ್ಟು "ಎ" ಅನ್ನಾಂಗದ ಅಂಶವಿರಲೇಬೇಕು.

ಹಸಿರು ಸೊಪ್ಪು, ಹಳದಿ ಹಣ್ಣು, ತರಕಾರಿ, ಕ್ಯಾರೆಟ್, ನೊಟ್ಟೆ, ಹಾಲು, ಬೆಣ್ಣೆ ಹಾಗೂ ತುಪ್ಪ ದಲ್ಲಿ "ಎ" ಅನ್ನಾಂಗವಿದೆ.

ಶಾರ್ಕ್‌ಲಿವರ್ ಎಣ್ಣೆ, ಕಾಡ್‌ಲಿವರ್ ಎಣ್ಣೆಯಲ್ಲಿ "ಎ" ಅನ್ನಾಂಗದ ಅಂಶ ಜಾಸ್ತಿ ಇರುತ್ತದೆ.

"ಎ" ಅನ್ನಾಂಗವನ್ನು 'ಹನಿ' ರೂಪದಲ್ಲಿ ಅಥವಾ ಮಾತ್ರೆ ರೂಪದಲ್ಲಿ ಕೂಡಾ ಕೊಡಬಹುದು. ನಿಮ್ಮ ಮಗುವಿಗೆ 'ಎ' ಜೀವಸತ್ವ ತಪ್ಪದೆ ಕೊಡಿ.

ಹೆಚ್ಚಿನ ವಿವರಗಳಿಗೆ :

ನಿರ್ದೇಶಕರು,
ಸಮಾಜ ಕಲ್ಯಾಣ ಇಲಾಖೆ,
ಕರ್ನಾಟಕ ಸರ್ಕಾರ,
ಬೆಂಗಳೂರು-ಇವರನ್ನು ಸಂಪರ್ಕಿಸಿರಿ

* * *

● ಕರ್ನಾಟಕ ವಾರ್ತೆ

ಮುಂದಾಳುಗಳ ಬಗ್ಗೆ ಅತ್ಯಂತ ಹೆಚ್ಚಿನ ಗೌರವವಿತ್ತು. ತರಗತಿಯ ಒಳಗೂ ಹೊರಗೂ ಅವನು ತನ್ನ ವಿದ್ಯಾರ್ಥಿಗಳಲ್ಲಿ ಕ್ರಾಂತಿಯ ವಿಚಾರಗಳು ಮತ್ತು ಆದರ್ಶಗಳನ್ನು ಮೂಡಿಸುವಲ್ಲಿ ಯಶಸ್ವಿಯಾಗಿದ್ದ.

ಹಿಂದೂ ಕಾಲೇಜಿನ ಸಂಪ್ರದಾಯವಾದಿಗಳ ಕಣ್ಣಲ್ಲಿ ಇದು ಅಕ್ಷಮ್ಯ ಅಪರಾಧವಾಗಿತ್ತು. ವಿದ್ಯಾರ್ಥಿಗಳ ಮನಸ್ಸನ್ನು ಭ್ರಷ್ಟಗೊಳಿಸುತ್ತಿದ್ದಾನೆ ಎನ್ನುವ ಆಪಾದನೆಗೆ ಅವನು ಕೊಟ್ಟ ಉತ್ತರ ಕೆಚ್ಚಿನದು. ಈ ಉತ್ತರದ ಒಂದೆರಡು ಸಾಲುಗಳನ್ನು ಉದಾಹರಿಸಿದರೂ ಅವು ಅವನ ಬೌದ್ಧಿಕ ಸಾಮರ್ಥ್ಯವನ್ನು ನಿರೂಪಿಸುವಂತಹವು : 'ದೇವರ ಇರುವಿಕೆಯ ಬಗ್ಗೆ ತತ್ವಜ್ಞಾನಿಗಳಲ್ಲಿ ಇರುವ ಸಂದೇಹಗಳನ್ನು ಹೇಳಿರುವೆನೆಂದು ಒಪ್ಪಿಕೊಳ್ಳಲು ನನಗೆ ಅವಮಾನವೂ ಇಲ್ಲ, ಹೆದರಿಕೆಯೂ ಇಲ್ಲ. ಏಕೆಂದರೆ ಈ ಸಂದೇಹಗಳಿಗೆ ಇರಬಹುದಾದ ಉತ್ತರಗಳನ್ನೂ ನಾನು ಹೇಳಿದ್ದೇನೆ. ಧರ್ಮವನ್ನು ಕುರಿತಂತೆ ಧೈರ್ಯವಾಗಿ ಯೋಚಿಸುವ ಯಾವನನ್ನೇ ಆಗಲಿ, ನೀವು ನನ್ನನ್ನು ಕರೆದಿರುವಂತೆ ಅವಿಧೇಯ ಹಾಗೂ ನಾಸ್ತಿಕ ಎಂದು ಮೂದಲಿಸುವುದು ಹೊಸದೇನಲ್ಲ. "3

ಹಿಂದೂ ಕಾಲೇಜಿನಿಂದ ಹೊರದೂಡಲ್ಪಟ್ಟು ಹಲವಾರು ವಿಧಗಳಲ್ಲಿ ಹಿಂಸೆಗೊಳಗಾದರೂ ದೆರೋಜಿಯೋ ವಿಚಾರ ಕ್ರಾಂತಿ ಬಿಟ್ಟುಕೊಡಲಿಲ್ಲ. ಸ್ವತಂತ್ರವೂ, ಸುಭದ್ರವೂ, ಸವಚೈತನ್ಯದಿಂದ ಕೂಡಿದ್ದೂ ಆದ ಭಾರತದ ಕನಸನ್ನು ಕಟ್ಟಿಕೊಂಡ ಕ್ರಾಂತಿಕಾರಿ ಡಿಸೆಂಬರ್ 26, 1831ರಂದು ತೀರಿಕೊಂಡ. ಅವನಿಗೆ ಸಂದ ಶ್ರದ್ಧಾಂಜಲಿಗಳಲ್ಲಿ ಅತ್ಯುತ್ತಮವಾದ್ದೊಂದು The Calcutta Review ಪತ್ರಿಕೆಯಲ್ಲಿ ಪ್ರಕಟವಾಯ್ತು.

"ಓ ನನ್ನ ದೇಶವೇ, ಗತಕಾಲದ ನಿನ್ನ ತೇಜಸ್ಸಿನ ದಿನಗಳು ನಿನ್ನ ಶಿರದ ಹಿಂಬದಿಗೆ ಮಿನುಗುವ ಕಾಂತಿ ಕಿರಣಗಳಾಗಿ ಬೆಳಗಿವೆ" ಎನ್ನುವ ಸಾಲುಗಳಲ್ಲೂ ಮತ್ತು ಅವನ ಮಾತುಕತೆಗಳಲ್ಲೂ ದೆರೋಜಿಯೋನ ಚಿಂತನ, ವ್ಯಕ್ತಿತ್ವದ ಅಸಲುತನ, ವಾದಗಳನ್ನು ಗೆಲ್ಲುವ ವೈಖರಿ, ಆಳ ಮತ್ತು ವಿಸ್ತಾರವಾದ ಓದು, ವಿದ್ಯಾರ್ಥಿಗಳ ಬಗ್ಗೆ ಸಹಾನುಭೂತಿಯನ್ನು ಇಟ್ಟುಕೊಳ್ಳಲು ಕಾರಣವಾದ ಹರೆಯದ ಹುರುಪು, ಮುಕ್ತವೂ, ದಯಾಪರವೂ ಧೈರ್ಯವಂತಿಕೆಯಿಂದ ಕೂಡಿದ ಗುಣ, ಬುದ್ಧಿವಂತಿಕೆ ಮತ್ತು ನಗುಮುಖದ ಸ್ವಭಾವ, ಸತ್ಯಸಂಗತಿಗಳ ಬಗೆಗಿನ ನಿಷ್ಠುರತೆ, ನಿಷ್ಪಕ್ಷ ಮತ್ತು ಹೇಯವಾದುದರ ಬಗ್ಗೆ ಅವನಿಗಿದ್ದ ಅನಾದರ– ಇವೆಲ್ಲವೂ ನಮಗೆ ಕಂಡುಬರುತ್ತವೆ. ವಿದ್ಯಾರ್ಥಿಗಳೊಂದಿಗೆ ಅವನು ಬೆರೆಯುತ್ತಿದ್ದ ರೀತಿಯು ಹಿಂದೂ ಸಮಾಜವು ಎಂದೂ ಕಾಣದಂತಹ ಬೌದ್ಧಿಕ ಮತ್ತು ನೈತಿಕ ಕ್ರಾಂತಿಯನ್ನೇ ಉಂಟುಮಾಡಿತು. 4

ದೆರೋಜಿಯೋ ಕಾಲದಲ್ಲೂ, ಮರಣಾನಂತರದ ಮೊದಲ ವರ್ಷಗಳಲ್ಲೂ ಹಲವು ಸಂಘಟನೆ–ಪತ್ರಿಕೆಗಳು ಕಲ್ಕತ್ತದಲ್ಲಿ ಹುಟ್ಟಿಕೊಂಡವು. ಸ್ವತಂತ್ರವಾಗಿ ಯೋಚಿಸುವಂತೆ ಯುವ ಪೀಳಿಗೆಯನ್ನು ಪ್ರೇರೇಪಿಸುವುದೇ ಅವೆಲ್ಲವುಗಳ ಗುರಿಯಾಗಿತ್ತು. ಆಧುನಿಕ ಕಾಲದ ಹರಿಕಾರನಾಗಿ ಫ್ರಾನ್ಸಿಸ್ ಬೇಕನ್ ಎಲ್ಲರ ಆದರಕ್ಕೆ ಪಾತ್ರನಾಗಿದ್ದರೂ ಬೇಕನ್ನನ ವಿಚಾರಗಳನ್ನೇ ಆಗಲಿ, ಪರೀಕ್ಷಿಸದೆ ಒಪ್ಪಿಕೊಳ್ಳುವುದು ಬೇಡ ಎಂದು ದೆರೋಜಿಯೋ ಹೇಳುತ್ತಿದ್ದ. **ಯುವ ಬಂಗಾಳ** ಎನ್ನುವ ಪ್ರಭಲ ಕ್ರಾಂತಿಕಾರೀ ಚಳುವಳಿಯ ಹುಟ್ಟಿಗೆ ದೆರೋಜಿಯೋನ ವಿಚಾರಗಳ ಪ್ರಭಾವವೂ ಕಾರಣವಾಗಿತ್ತು. ಅವನು ಸತ್ತು ಇಪ್ಪತ್ತು ವರ್ಷಗಳ ನಂತರ The Calcutta Review ಪತ್ರಿಕೆಯು ಅವನನ್ನು ಈ"ಹೊಸಯುಗದ ಮಹಾಚೈತನ್ಯ"5 ಎಂದು ಕರೆಯಿತು. ಇಂತಹ ಯುಗವು ಅಲ್ಪಕಾಲದಲ್ಲೇ ಕೊನೆಯುಸಿರೆಳೆಯಲು ಭಾಗಶಃ ರಾಜಾರಾಂ ಮೋಹನರಾಯ ಕೂಡಾ ಕಾರಣ ಎನ್ನಬೇಕಾಗುತ್ತದೆ.

ರಾಜಾರಾಂ ಮೋಹನರಾಯ ಅವರ ವ್ಯಕ್ತಿತ್ವವನ್ನು ಕುಬ್ಜಗೊಳಿಸುವುದು ನನ್ನ ಉದ್ದೇಶವಲ್ಲ. ಅದು ವಿವೇಕಯುತವಾದ್ದಲ್ಲ. ಅವರು ಎದ್ದು ಕಾಣುವ ಎತ್ತರದ ವ್ಯಕ್ತಿ. ಆದರೂ ಗಾಂಧಿ ಅವರನ್ನು 'ಕುಬ್ಜ' ಎಂದು ಬಗೆದದ್ದು ಸಂಪೂರ್ಣವಾಗಿ ತಪ್ಪು. ಟಾಗೋರರು ಗಾಂಧಿಯ ಈ ಸಲ್ಲದ ಅಭಿಪ್ರಾಯಕ್ಕಾಗಿ ರೇಗಿದ್ದೂ ಉಂಟು. ಹೀಗಿರುವಾಗ ದೆರೋಜಿಯೋನನ್ನು ಕಡೆಗಣಿಸಿ ರಾಜಾರಾಂ ಮೋಹನರಾಯ ಅವರನ್ನು ಆಯ್ಕೆಮಾಡಿಕೊಂಡದ್ದು ತಪ್ಪು ಎಂದು ಹೇಳಿದರೆ ಆಶ್ಚರ್ಯಪಡಬೇಕಾದ್ದಿಲ್ಲ.

ಮುಂದುವರೆಯುವುದು

ಕಾವ್ಯ

ಪರಿಚಯ

ಊರಿನ ಹೊರಗೆ
ಕೊಳಚೆ ನೀರು ಗಟಾರಿನ ಕೊನೆ
ಗೋಡೆಯಿಲ್ಲದ
ರೂಪ ಅದೇ ನನ್ನ ಮನೆ
ಒಂಟಿಗಣ್ಣಿನ ಹೆಂಗಸು
ಕುಂಟು ಕಾಲು
ಹರಕು ಸೀರೆ ಪಕ್ಕದಲ್ಲೇ ನಾಯಿ
ಅವಳೇ ನನ್ನ ತಾಯಿ

ಕರ್ರಗಿನ ಬಣ್ಣನವ
ಕೆಂಪು ಕಣ್ಣನವ
ಬಾಯಿ ತೆಗೆದರೆ ಬಯ್ಯುವ
ಅವನೇ ನನ್ನ ಹಡೆದವ
ಕನಸಿನ ವಯಸ್ಸಿನವಳು
ಚಳಿಗಾಳಿ ಮಳೆಯಲ್ಲಿ ಅಳು ನುಂಗಿ
ಕುಳ್ಳು ತಟ್ಟುವ ಹುಡುಗಿ
ಅವಳೇ ನನ್ನ ತಂಗಿ

ಮನೆ ಮುಂದೆ
ಮಣ್ಣು ತಿನ್ನುವ
ಬತ್ತಲು ಹುಡುಗ
ಅವನೇ ನನ್ನ ತಮ್ಮ

ಮಲಪ್ರಭೆಯ ಅಪ್ಪುಗೆಯಲ್ಲಿ
ಹಣದ ಸೊಕ್ಕಿನಲ್ಲಿ
ಸಿರಿವಂತರ ಭಯದಲ್ಲಿ
ತೊನೆಯುತ್ತಿರುವುದೇ ನನ್ನ ಊರು

ಹುಟ್ಟಿದ್ದೇನೆ
ಅದಕ್ಕೇ ಬದುಕುತ್ತಿದ್ದೇನೆ
ನನ್ನ ಊರು ಸ್ಥಿತಿ ನೋಡಿ
ಇಂಚಿಂಚೂ
ಸಾಯುತ್ತಿದ್ದೇನೆ.

ಮೂಲ : **ಮರಾಠಿ ದಲಿತ ಕವಿ ಸೂರ್ಯಕಾಂತ ಅಡಸೂಳೆ**
ಅನು : **ಸರೆಜೂ ಕಾಟಕರ್**

ಕಾರಂಚೇಡು

ಹೋರಾಟದ ಸಾಗರಕ್ಕೆ ಸಾವಿರಾರು ನದಿಗಳು.

ಕಾರಂಚೇಡು ನೆರೆಯ ಆಂಧ್ರದ ಪ್ರಕಾಶಂ ಜಿಲ್ಲೆಯ ಒಂದು ಗ್ರಾಮ. 1985 ರ ಜುಲೈ 17 ರಂದು ಅಲ್ಲಿನ ದಲಿತರ ಕೇರಿಯ ಮೇಲೆ ಕಮ್ಮಾ ಜಾತಿಯ ಸವರ್ಣೀಯರು ದಾಳಿ ಮಾಡಿ 8 ಜನ ದಲಿತರನ್ನು ಕೊಚ್ಚಿ ಹಾಕಿದರು. ಇಬ್ಬರು ಮಹಿಳೆಯರ ಮೇಲೆ ಅತ್ಯಾಚಾರ ನಡೆಯಿತು. ಒಬ್ಬ ತುಂಬು ಗರ್ಭಿಣಿಯ ಹೊಟ್ಟೆ ಬಗೆಯಲಾಗಿತ್ತು.

ಒಂದು ವರ್ಷದ ನಂತರ ಹತ್ತಿರದ ಚಿರಾಲದಲ್ಲಿ ಒಂದು ಹತ್ಯಾಕಾಂಡ ಖಂಡನಾ ಸಭೆ. ಎರಡು ಲಕ್ಷ ಜನ ಸಮಾವೇಶಗೊಂಡಿದ್ದರು.

ಎರಡು ವರ್ಷಗಳ ನಂತರ ಅದೇ ಸ್ಥಳದಲ್ಲೊಂದು ಗುಲಾಮಗಿರಿಯಿಂದ, ಜಾತಿ ಭೇದಗಳಿಂದ ಮುಕ್ತವಾದ ಹೊಸ ಗ್ರಾಮ 'ವಿಜಯನಗರ' ನಿರ್ಮಾಣ. ಈ ಸೃಷ್ಟಿಯ ರೂವಾರಿ 'ಆಂಧ್ರ ಪ್ರದೇಶ ದಲಿತ ಮಹಾಸಭಾ' ಈ ಹೊಸ ಗ್ರಾಮದ ಉದ್ಘಾಟನೆಯಲ್ಲಿ ರಾಜ್ಯ ದ.ಸಂ.ಸ. ಸಕ್ರಿಯವಾಗಿ ಪಾಲು ಗೊಂಡಿತ್ತು.

ವರದಿ :

● ಕುಟಿಯ

ಚಿರಾಲ, ಜುಲೈ 17– ಎರಡು ವರ್ಷಗಳ ಹಿಂದೆ ಇದೇ ದಿನ ಕಾರಂಚೇಡು ವಿನಲ್ಲಿ ನಡೆದ ಪೈಶಾಚಿಕ ಬರ್ಬರತೆಯ ವಿರುದ್ಧ ನಿರಂತರ ಹೋರಾಡುತ್ತಾ ಅಲ್ಲಿನ ಎಲ್ಲ ಶೋಷಕ ಶಕ್ತಿಗಳಿಗೆ ಸವಾಲಾಗಿ ನಿಂತಿರುವ ಆಂಧ್ರ ದಲಿತ ಮಹಾಸಭಾ ಕಾರಂಚೇಡು ದಲಿತರಿಗಾಗಿ ಪ್ರತ್ಯೇಕ ಗ್ರಾಮವೊಂದನ್ನು ಕಟ್ಟಿ ಅವರ ಕೈಗಿಟ್ಟಿತು. ಕಳೆದ ಒಂದೆರಡು ವರ್ಷಗಳಿಂದ ಚಿಗುರೊಡೆಯುತ್ತಿರುವ ಮಹಾಸಭಾ ಇಂದು ದಲಿತರ ಮನೆ ಮನೆಯ ಮಾತು. ಹಸಿವು, ಅಸ್ಪೃಶ್ಯತೆ, ನೋವು ಇವರ ತಳಹದಿ. ಅಂಬೇಡ್ಕರ್ ಕಂಡ ಬೆಳಕು ಇದರ ದಾರಿದೀಪ. ಇಂದು ಪ್ರತಿ ಜಿಲ್ಲೆ, ಪ್ರತಿ ತಾಲ್ಲೂಕು, ಗ್ರಾಮಗಳ ಹಂತದವರೆಗೂ ಸಂಘಟನೆ ಹಬ್ಬುತ್ತಾ ನಡೆದಿದೆ.

ಸಭಾದ ಕ್ರಿಯಾಶೀಲ ಕಾರ್ಯಕರ್ತರು ಮುಂಚೂಣಿಯಲ್ಲಿ ನಿಂತು ಹಿತೈಷಿಗಳ, ಪ್ರಗತಿಪರ ಚಿಂತಕರ, ಸಾರ್ವಜನಿಕರ ನೆರವಿನೊಂದಿಗೆ ಈ ನೂತನ ಗ್ರಾಮದ ಸೃಷ್ಟಿಯನ್ನು ಪೂರೈಸಿದ್ದಾರೆ. ಹೊಸ ಸಮತಾ ಸಂಸ್ಕೃತಿಗೆ ಬೀಜ ಹಾಕಿದ್ದಾರೆ. ಸಾರ್ವಜನಿಕರಿಂದ ಹಣ, ದವಸ, ದಾನ್ಯಗಳನ್ನು ಸಂಗ್ರಹಿಸಿ ತಲಾ ಹತ್ತು ಸಾವಿರ ಬೆಲೆ ಬಾಳುವ 435 ಆರ್.ಸಿ.ಸಿ. ಮನೆಗಳು, ಯಾಂತ್ರಿಕ ಸಾಮಾನು ತಯಾರಿಕೆಯ ಕೈಗಾರಿಕಾ ಕೇಂದ್ರ, ಆಸ್ಪತ್ರೆ, ಶಾಲೆಗಳನ್ನು ಕಟ್ಟಿಸಿದ್ದಾರೆ.

ಈ ಪ್ರತಿ ಸೃಷ್ಟಿಯ ಗ್ರಾಮದ ಹೆಸರು 'ವಿಜಯನಗರ'. ಈ ಗ್ರಾಮದ ಮುಂಭಾಗದಲ್ಲಿ ಅಂದಿನ ದಾಳಿಯಲ್ಲಿ ಮೃತರಾದ ಆರು ಜನ ಹುತಾತ್ಮರಿಗೆ ಸ್ಮಾರಕ ಸಮಾಧಿಗಳನ್ನು ನಿರ್ಮಿಸಲಾಗಿದೆ. ಹೇಳ ಹೆಸರಿಲ್ಲದಂತೆ, ಸಾಕ್ಷ್ಯಾಧಾರಗಳೇ ಇಲ್ಲದಂತೆ ಜಾತಿ ದಳ್ಳುರಿಯಲ್ಲಿ ಬೆಂದುಹೋಗುತ್ತಿದ್ದ ದಲಿತ ಇತಿಹಾಸಕ್ಕೊಂದು ಮೂಕ ಸಾಕ್ಷಿಯಾಗಿ, ದಾರುಣ ವಾಸ್ತವವಾಗಿ ಈ ಸಮಾಧಿಗಳು ಹೊರಗಿನವರೆಗೆ ಮೌನ ಸ್ವಾಗತ ನೀಡುತ್ತವೆ.

ಈ ಜುಲೈ 17ರಂದು ಈ ಗ್ರಾಮದ ಉದ್ಘಾಟನಾ ಸಮಾರಂಭ. ಆಂಧ್ರ ಪ್ರದೇಶದ ಮೂಲೆ ಮೂಲೆಗಳಿಂದ ಬಂದ ಸಹಸ್ರಾರು ಜನ ಕಾರಂಚೇಡುವಿನಲ್ಲಿ ಜೇನುಗೂಡಿನಂತೆ ನೆರೆದಿದ್ದರು. ದಿಕ್ಕಿಲ್ಲದ ಜನ ಸಮುದಾಯಕ್ಕೊಂದು ದಿಕ್ಕಾದ ಪರಿ ಕಂಡು ಬೆರಗಾದರು, ಈ ಅಪರೂಪ ಸಮಾವೇಶದಲ್ಲಿ ರಾಜ್ಯ ದ.ಸಂ.ಸ. ಕೂಡ ತುಂಬು ಮನಸ್ಸಿನಿಂದ ಪಾಲುಗೊಂಡಿತ್ತು.

ಅಂದು ಉದ್ಘಾಟನೆಯ ವೇದಿಕೆಯಲ್ಲಿ ಮುಖ್ಯರಾಗಿದ್ದವರು, 'ಮಹಾಸಭಾ'ದ ಅಧ್ಯಕ್ಷ ಬೊಜ್ಜಾ ತಾರಕಂ, ಕಾರ್ಯದರ್ಶಿ ಕತ್ತಿ ಪದ್ಮರಾವ್, ದ.ಸಂ.ಸ. ರಾಜ್ಯ ಸಂಚಾಲಕ ಬಿ.ವಿ. ಚಂದ್ರಪ್ರಸಾದ್ ತ್ಯಾಗಿ.

ಉದ್ಘಾಟಿಸಿದ್ದು ಓರ್ವ ಕಾರಂಚೇಡು ಹುತಾತ್ಮನ ಮಡದಿ. ಮಡಿದವರ ಗೋರಿಗಳಿಗೆ ಹೂವಿನ ಹಾರ ಹಾಕಿ ಸ್ಮರಿಸಿದರು. ಆಂಧ್ರ, ಮಹಾರಾಷ್ಟ್ರ, ಕರ್ನಾಟಕ, ತಮಿಳುನಾಡು ಹೀಗೆ ಸುತ್ತಲ ರಾಜ್ಯಗಳಿಂದ ಆಗಮಿಸಿದ್ದ ಸಹಸ್ರಾರು ಜನಸ್ತೋಮ ಕ್ಷಣಕಾಲ ಘೋರ ಹತ್ಯಾಕಾಂಡ ಸ್ಮರಿಸಿ ಗದ್ಗದಿತವಾಯಿತು. ಭಾಷೆ, ಪ್ರಾಂತ್ಯ ಭೇದಗಳನ್ನು ಮರೆತು ಅಗಲಿದ ಒಡನಾಡಿಗಳಿಗೆ ಶ್ರದ್ಧಾಂಜಲಿ ಅರ್ಪಿಸಿತು. ಇನ್ನೊಂದು ದುರಂತ ಆಗದಂತೆ ತಡೆಯುವ ಜಾಗೃತಿಗೆ ಪಣ ತೊಟ್ಟಿತ್ತು. ನವ ಸಮಾಜ ನಿರ್ಮಾಣದ ದಿಕ್ಕಿನಲ್ಲಿ ಮೂಡಿದ ಮಹತ್ತರ ಹೆಜ್ಜೆಯ ಈ ಸಮಾವೇಶ ದಲಿತರ ಐಕ್ಯತೆಯ ದ್ಯೋತಕವಾಗಿ 'ಹೋರಾಟದ ಸಾಗರಕ್ಕೆ ಸಾವಿರಾರು ನದಿಗಳ' ಕಲವರದಂತೆ ಮಾರ್ದನಿಸಿತು. ನೆರೆದವರ ಕಣ್ಮನಗಳಲ್ಲಿ ಒಂದು ಹೊಸ ಕನಸು, ಹೊಸ ಸ್ಫೂರ್ತಿ ಪಡಿಮೂಡಿತು.

ಡಾ॥ ಅಂಬೇಡ್ಕರ್‌ರವರ ಹೋರಾಟದ ಆಶಯದ ಕರೆಯ ರಥ ಹರಿದು ಹೋಗುತ್ತಿದ್ದ ಅಂದಿನ ಬೃಹತ್ ಮೆರವಣಿಗೆಯಲ್ಲಿ ತೆಲುಗು, ಕನ್ನಡದ ಕ್ರಾಂತಿ ಗೀತೆಗಳು ಮೊಳಗಿದವು. ದಲಿತರನ್ನು, ನಿರ್ಗತಿಕರನ್ನು ಸದಾ ತಮ್ಮ ಪದತಲದಲ್ಲಿ ತುಳಿದಿಟ್ಟ ಶೋಷಕರ ಎದೆಗಳಲ್ಲಿ, ರಾಜಕಾರಣಿಗಳ ಖದ್ದರ್ ಉಡುಪುಗಳಲ್ಲಿ ಆತಂಕದ ಅಲೆಗಳೆಬ್ಬಿಸಿದವು.

ಸಂಜೆ ಬೃಹತ್ ಬಹಿರಂಗ ಸಭೆ. ಅಧ್ಯಕ್ಷತೆ ವಹಿಸಿದ್ದ ಮಹಾಸಭಾದ ಕಾರ್ಯದರ್ಶಿ ಕತ್ತಿ ಪದ್ಮರಾವ್ "ಜಾತೀಯತೆ, ದೌರ್ಜನ್ಯ, ದಬ್ಬಾಳಿಕೆಗಳಿಂದ ಬಿಡುಗಡೆ ಪಡೆಯಲು ಸಂಘಟನಾತ್ಮಕ ಹೋರಾಟ ಹೂಡುವಂತೆ"

(ಮುಂದಿನ ಪುಟಕ್ಕೆ)

ಮೀಸಲಾತಿಯ ಇತ್ತೀಚಿನ ಆಯಾಮಗಳು

(ಹಿಂದಿನ ಪುಟದಿಂದ)

ಆ ನಂತರದಲ್ಲಿ ಹುಟ್ಟಿ ಬಂದ ದಲಿತ ಚಳವಳಿಗಳು ಕೂಡ ಮೀಸಲಾತಿ ಬಗ್ಗೆ ಅಷ್ಟೇನೂ ಮಮಕಾರ ತಾಳಲಿಲ್ಲ. ಬದಲಿಗೆ ಮೀಸಲಾತಿ ಸೌಲಭ್ಯ ಕಡು ದಾರಿದ್ರ್ಯದ ಕತ್ತಲು ಒಡಲಿಂದ ಮೂಡಿ ಬಂದ ಒಳ್ಳೊಳ್ಳೆಯ ಭರವಸೆಯ ಬೆಳಕಿನ ಕುಡಿಗಳನ್ನು ವ್ಯವಸ್ಥೆಯ ನೊಗ ಹೊರಲು ಹಚ್ಚುತ್ತದೆ ಎಂದೇ ಭಾವಿಸಿತು

ಈ ಮೀಸಲಾತಿ ಕೀಳರಿಮೆಯನ್ನು ಕಿತ್ತೆಸೆಯಬಲ್ಲದು. ರಾಜಕೀಯ ಮೀಸಲಾತಿ ಎಷ್ಟೇ ನಾಮಕಾವಸ್ಥೆಯಾದರೂ ಇವತ್ತಿನ ದಲಿತರಲ್ಲಿ ಮೂಡುತ್ತಿರುವ ಹೊಸ ಜಾಗೃತಿಗೆ ಎಷ್ಟೇ ಅಲ್ಪವಾದರೂ ಅದು ತನ್ನದೇ ಆದ ಕಾಣಿಕೆ ಕೊಟ್ಟಿದೆ.

ಈಗಲೂ ಕೂಡ ಕಾಲ ಮಿಂಚಿಲ್ಲ. ಎಲ್ಲ ದುರ್ಬಲರಿಗೂ ಮೀಸಲಾತಿ ಸೂಕ್ತವಾಗಿ ದೊರಕುವಂತೆ ಮಾಡಲು ಮಹತ್ತರ ಚಳವಳಿಯೊಂದು ತಲೆ ಎತ್ತಬೇಕಾಗಿದೆ. ಆ ದಿನಕ್ಕಾಗಿ ಆಸೆಯಿಂದ ಎದುರು ನೋಡುವುದರಲ್ಲಿ ಯಾವ ತಪ್ಪೂ ಇಲ್ಲ. ●

(11ನೇ ಪುಟದಿಂದ)

ಕರೆ ನೀಡಿದರು. ಸಭೆಯ ಮುಖ್ಯ ಅತಿಥಿಯಾಗಿದ್ದ ಕ.ದ.ಸಂ.ಸ. ರಾಜ್ಯ ಸಂಚಾಲಕ ಬಿ.ವಿ.ಚಂದ್ರಪ್ರಸಾದ್ ತ್ಯಾಗಿ "ಭೂಮಾಲಿಕರ ಕೈಯಲ್ಲಿ ಕೇಂದ್ರೀಕರಣಗೊಂಡ, ಮಠಮಾನ್ಯಗಳ ಹಿಡಿತದಲ್ಲಿ ಸಿಕ್ಕಿಬಿದ್ದ ಬಡವರ ಹಕ್ಕಿನ ಭೂಮಿಯನ್ನು ದಕ್ಕಿಸಿಕೊಳ್ಳುವಂತೆ" ಹಾಗೂ "ಗುಡಿ ಕೈಗಾರಿಕೆಗಳನ್ನು ಅನ್ಯಾಯವಾಗಿ ನಿರ್ನಾಮ ಮಾಡಿ ಹೊಸ ಹೊಸ ಕುತಂತ್ರಗಳಿಂದ ಜನತೆಯನ್ನು ಲೂಟಿ ಮಾಡುತ್ತಿರುವ ಕೈಗಾರಿಕೋದ್ಯಮಿಗಳ ಕುಟಿಲ ಜಾಲ"ದ ವಿರುದ್ಧ ಹೋರಾಟ ಮಾಡುವಂತೆ ಕರೆ ನೀಡಿದರು. ಮಹಾಸಭೆಯ ಅಧ್ಯಕ್ಷ ಬೊಜ್ಜಾತಾರಕಂ ಕಾರಂಚೇಡು ದಲಿತರ ಮಾರಣಹೋಮದ ಹಿಂದೆ ಹಾಗೂ ಆನಂತರದ ಬೆಳವಣಿಗೆಗಳಲ್ಲಿ ಹೇಗೆ ಪೊಲೀಸರು, ರಾಜಕೀಯ ಶಕ್ತಿಗಳು, ದಲಿತರ ಹಿತಾಸಕ್ತಿಗಳನ್ನು ಬಗ್ಗುಬಡಿಯಲು ಶ್ರಮಿಸಿದರು ಎಂಬುದನ್ನು ಎಳೆಎಳೆಯಾಗಿ ವಿವರಿಸಿದರು.

ಒಟ್ಟಾರೆ ಸಮಾವೇಶ ಕರ್ನಾಟಕದಿಂದ ಹೋಗಿದ್ದ ದ.ಸಂ.ಸ. ಕಾರ್ಯಕರ್ತರಲ್ಲಿ ಸಂಘಟನೆಯ ಹೊಸ ಚೈತನ್ಯ ಮೂಡಿಸಿತು. ಗುರುತರವಾದ ಜವಾಬುದಾರಿಯನ್ನು ಗುರುತು ಮಾಡಿಕೊಟ್ಟಿತು. ಕಾರಂಚೇಡು ಇಂಡಿಯಾದ ದಲಿತರ ಎದೆಗುಂಡಿಗೆಯಲ್ಲಾದ ಮಾಯದ ಗಾಯ.

ಈ ಗಾಯದ ನೋವು, ನೆನಪು, ನಮ್ಮೆಲ್ಲರನ್ನೂ ಮುಂದೆ ಸಾಗಲು ಎಚ್ಚರಿಸುವ ಕಾರ್ಗತ್ತಲ ರಾತ್ರಿಯ ಬೆಳಕು. ●

PANCHAMA

(Form IV Sce Rule 8.]

1. Place of Publication	—	Bangalore, Karnataka State
2. Periodicity of Publicatian	—	Fortnightly
3. Printer's Name	—	Rangaswamy Belladamadu
Whether the citizen of India	—	Yes
4. Editor's Name	—	Rangaswamy Belladamadu
Whether the Citizen of India	—	Yes.
5. Name and address of Individuals who own the News paper and Partners or Share holdeı, holding more than one percent of the capital.		1. H. Govindaiah 2. Indudhara Honnapura 3. Shivaji Ganeshan 4. Shivamalla Devanur 5. Ramadeva Rake

2B, Mahadeswara Nilaya, 2nd Cross, 2nd Main,
A k. Colony, Hosalli, Bangalore-560040

Rangaswamy Belladamadu, here by declare that the Particulars above are true to the best of my Knowledge and belief.

Place— Bangalore
Date — 24-7-87

(Sd) Rangaswamy Belladamadu
Signature of the Publisher